
ಬ್ರಹ್ಮರ್ಷಿ ಪಿತಾಮಹ ಸುಭಾಷ್ ಪತ್ರೀಜಿ ಆಶೀರ್ವಾದಗಳೊಂದಿಗೆ

# ಮಹಾತ್ಮರ ಸಂದೇಶಗಳು

ಬ್ರಹ್ಮರ್ಷಿ ತಟವರ್ತಿ ವೀರರಾಘವರಾವ್




ಅನುವಾದ : ಕೆ. ಶೋಭಾಲತ

ಬ್ರಹ್ಮರ್ಷಿ ಪಿತಾಮಹ ಪತ್ರೀಜಿ ಆಶೀರ್ವಾದದೊಂದಿಗೆ

# ಮಹಾತ್ಮರ ಸಂದೇಶಗಳು

ತಟವರ್ತಿ ವೀರರಾಘವರಾವು



ಕನ್ನಡ ಅನುವಾದ : **ಕೆ. ಶೋಭಾಲತ**

**ಶ್ರೀರಾಮ ಪಬ್ಲಿಕೇಶನ್ಸ್**
ಶ್ರೀ ರಾಮಧಾಮ ಪಿರಮಿಡ್ ಧ್ಯಾನಕೇಂದ್ರ,
ನಾರಾಯಣಪ್ಪಗಾರ್ಡನ್, ವೈಟ್‌ಫೀಲ್ಡ್, ಬೆಂಗಳೂರು – 560 066

---

**ಪಿರಮಿಡ್ ವ್ಯಾಲಿ ಇಂಟರ್‌ನ್ಯಾಷನಲ್**
ಕೆಬ್ಬೆದೊಡ್ಡಿ ಗ್ರಾಮ, ಹಾರೋಹಳ್ಳಿ ಹೋಬಳಿ, ಕನಕಪುರ ರಸ್ತೆ, ಬೆಂಗಳೂರು

**Mahatmara Sandeshagalu:**
Edited & Published by **Srirama Publications,**
Sri Ramadhama Pyaramid Dyanakendra, Narayanappa Garden, Whitefiled, Bangalore - 560 066. **M.: 9449695503, 8050082689, 9886532204**

| | | |
|---|---|---|
| ಮೊದಲನೇ ಮುದ್ರಣ | : | 2025 |
| ಹಕ್ಕುಗಳು | : | ಪ್ರಕಾಶಕರು |
| ಪ್ರಕಾಶಕರು | : | **ಶ್ರೀರಾಮ ಪಬ್ಲಿಕೇಶನ್ಸ್**<br>ಶ್ರೀ ರಾಮಧಾಮ ಪಿರಮಿಡ್ ಧ್ಯಾನಕೇಂದ್ರ,<br>ನಾರಾಯಣಪ್ಪಗಾರ್ಡನ್, ವೈಟ್‌ಫೀಲ್ಡ್,<br>ಬೆಂಗಳೂರು – 560 066<br>ಮೊ.: 9449695503, 9886532204 |
| ಬಳಸಿದ ಕಾಗದ | : | 70 ಜಿ.ಎಸ್.ಎಂ. ಮ್ಯಾಪ್‌ಲಿಥೊ ಡೆಮಿ 1/8 |
| ಪ್ರತಿಗಳು | : | 1000 |
| ಬೆಲೆ | : | 40/– ರೂ |
| ಪುಟಗಳು | : | 40 |
| ಮುಖಪುಟ | : | ಚಂದ್ರಕಾಂತ ಪಟ್ಟಣ |
| ಅಕ್ಷರ ಜೋಡಣೆ | : | **ನಿರಂತರ ಸಾಯಿ ಕಮ್ಯೂನಿಕೇಷನ್ ಪ್ರೈ .ಲಿ**<br>ಮೊ: 96328 12541 |

ಮುದ್ರಣ :

**ಪೂರ್ಣಾ ಗ್ರಾಫಿಕ್ಸ್,**

ಬೆಂಗಳೂರು 9844167475

# ಸ್ವ-ಪರಿಚಯ

ನನ್ನ ಹೆಸರು ಎಚ್.ಎನ್.ಶ್ರೀನಿವಾಸ. ವೃತ್ತಿಯಲ್ಲಿ ಸಿವಿಲ್ ಇಂಜಿನಿಯರ್. ಪದವಿ ಪಡೆದ ಆರಂಭದಲ್ಲಿ, ಮೂರು ವರ್ಷಗಳ ಕಾಲ ಸರ್ಕಾರಿ ಉದ್ಯೋಗದಲ್ಲಿ ಕೆಲಸ ಮಾಡಿದ ನಂತರ, ಆ ಉದ್ಯೋಗದಲ್ಲಿ ನಿರಾಸಕ್ತಿ ಹೊಂದಿದ ನಾನು, 1990ರಲ್ಲಿ ನನ್ನ ಸ್ವಂತ ವ್ಯವಹಾರವನ್ನು ಪ್ರಾರಂಭಿಸಿದೆ. ನನ್ನ ಆಧ್ಯಾತ್ಮಿಕ ಪ್ರಯಾಣವು 1999ರಲ್ಲಿ ಎಸ್.ಎಸ್.ವೈ. ಅಂದರೆ, ಸಿದ್ಧಸಮಾಧಿ ಯೋಗ ಗುರೂಜಿಯವರಿಂದ ಪ್ರಾರಂಭವಾಯಿತು. 2004ರಲ್ಲಿ ವೀರಾಂಜನೇಯ ದೇವಾಲಯವನ್ನು ಬೆಂಗಳೂರಿನ ವೈಟ್‌ಫೀಲ್ಡ್‌ನಲ್ಲಿ ನಿರ್ಮಿಸಲಾಯಿತು. ಎಲ್ಲಾ ಆಚರಣೆಗಳು ದೇವಾಲಯದಲ್ಲಿ ನಿಯಮಿತವಾಗಿ ನಡೆಯುತ್ತಿದ್ದವು. ಆಧ್ಯಾತ್ಮದ ಬಗ್ಗೆ ನನಗೆ ಒಲವು ಹೆಚ್ಚಾದಂತೆ ನಾನು ಮತ್ತು ನನ್ನ ಪತ್ನಿ ಎಸ್.ಎನ್.ವಿಜಯಲಕ್ಷ್ಮಿ ಸೇರಿ 2008ರಲ್ಲಿ ನಾವು ದೇವಾಲಯದ ಪಕ್ಕದಲ್ಲಿ 'ಶ್ರೀ ರಾಮಧಾಮ ಧ್ಯಾನ ಮಂದಿರ' ಎಂಬ ಹೆಸರಿನ ಒಂದು ಧ್ಯಾನ ಮಂದಿರವನ್ನು ನಿರ್ಮಿಸಿದೆವು. ಇದನ್ನು ಸಿದ್ಧಸಮಾಧಿ ಯೋಗ ಸಂಸ್ಥಾಪಕರಾದ ಡಾ.ಋಷಿ ಪ್ರಭಾಕರ್ ಗುರೂಜಿಯವರು ಉದ್ಘಾಟಿಸಿದರು. ಅಲ್ಲಿ ಎಸ್.ಎಸ್.ವೈ. ಶಿಕ್ಷಕರಿಂದ ಸಾಮೂಹಿಕ ಧ್ಯಾನ ತರಬೇತಿಗಳನ್ನು ಆಯೋಜಿಸುತ್ತಿದ್ದೆವು. 2009ರಲ್ಲಿ ಬ್ರಹ್ಮರ್ಷಿ ಪಿತಾಮಹ ಡಾ.ಸುಭಾಷ್ ಪತ್ರೀಜಿಯವರು ಧ್ಯಾನ ಅಧಿವೇಶನಕ್ಕಾಗಿ ಶ್ರೀರಾಮಧಾಮ ಕೇಂದ್ರಕ್ಕೆ ಭೇಟಿ ನೀಡಿದಾಗ 'ಆನಾಪಾನಸತಿ ಧ್ಯಾನ ವಿಧಾನ'ವನ್ನು ಪರಿಚಯ ಮಾಡಿಸಿದರು. ಪತ್ರೀಜಿಯವರನ್ನು ಭೇಟಿಯಾದ ನಂತರ, ದಿನನಿತ್ಯದ ನನ್ನ ಆಧ್ಯಾತ್ಮಿಕ ಅಭ್ಯಾಸದ ಕಾಲಾವಧಿಯನ್ನು ಹೆಚ್ಚಿಸಿದೆ. ಪಿ.ಎಸ್.ಎಸ್.ಎಂ.ನ ತತ್ವಸಿದ್ಧಾಂತದಲ್ಲಿ ಗುರು–ಶಿಷ್ಯರ ಕುರಿತಾದ ಒಂದು ಪ್ರಮುಖವಾದ ಅಂಶವು ನನ್ನ ಗಮನ ಸೆಳೆಯಿತು. 'ಯಾರೂ ಶಾಶ್ವತವಾಗಿ ಗುರುಗಳಲ್ಲ, ಯಾರೂ ಶಾಶ್ವತವಾಗಿ ಶಿಷ್ಯರೂ ಅಲ್ಲ, ಅವರಿಗೆ ಅವರೇ ಗುರುಗಳು. ಮಾಸ್ಟರ್ ಆಗಿ ಬದುಕಲು ಕಲಿಯಿರಿ, ಎಂದಿಗೂ ಶಿಷ್ಯರಾಗಿಯೇ ಇರಬೇಡಿ' ಎಂಬ ಪತ್ರೀಜಿಯವರ ಮಾತುಗಳು ಆಧ್ಯಾತ್ಮದಲ್ಲಿ ನನ್ನ ಆಸಕ್ತಿಯನ್ನು ಹೆಚ್ಚಿಸಿತು. 2013ರಲ್ಲಿ ಪತ್ರೀಜಿಯವರು ನನಗೆ ಪಿರಮಿಡ್ ವ್ಯಾಲಿ ಇಂಟರ್‌ನ್ಯಾಷನಲ್ ಟ್ರಸ್ಟ್‌ನಲ್ಲಿ ಒಬ್ಬ ಟ್ರಸ್ಟಿಯಾಗಿ ಸೇವೆ ಮಾಡುವ ಸದವಕಾಶವನ್ನು ಒದಗಿಸಿದರು.

ಇದರಲ್ಲಿ ನನಗೆ 'ನಿತ್ಯಅನ್ನದಾನ ಸೇವೆ'ಯ ಜವಾಬ್ದಾರಿಯನ್ನು ವಹಿಸಲಾಯಿತು.

ಪ್ರತಿಯೊಬ್ಬ ಮಾನವನು ಮಾಧವನಾಗಬೇಕಾದರೆ ಪ್ರತಿನಿತ್ಯವೂ ಶ್ರದ್ಧೆ, ಆಸಕ್ತಿಯಿಂದ ಧ್ಯಾನಾಭ್ಯಾಸ ಮಾಡಬೇಕು. ಅದರ ಜೊತೆಯಲ್ಲಿ 'ಸಸ್ಯಾಹಾರ', 'ಸ್ವಾಧ್ಯಾಯ', 'ಸಜ್ಜನ–ಸಾಂಗತ್ಯ, ಅಂದರೆ, ಸತ್ಸಂಗ' ಹಾಗೂ 'ಪಿರಮಿಡ್ ಶಕ್ತಿ ಬಳಕೆ' ಅವಶ್ಯಕ ಎಂದು ಆಧ್ಯಾತ್ಮಶಾಸ್ತ್ರ ತಿಳಿಸುತ್ತದೆ. ನಿರಂತರ, ಸಾಧನೆಯಿಂದ ಶಾರೀರಿಕ ಆರೋಗ್ಯ, ಮಾನಸಿಕ ಪ್ರಶಾಂತತೆ, ಬುದ್ಧಿ–ವಿಕಾಸ, ಆನಂದದ ಜೀವನ, ಆತ್ಮಜ್ಞಾನ ಮುಂತಾದವುಗಳು ಲಭಿಸುವುದು. ಹೊಸ ಯುಗದ ಆಧ್ಯಾತ್ಮ ಸಾಹಿತ್ಯವನ್ನು ಸ್ವಾಧ್ಯಾಯಕ್ಕಾಗಿ ಪ್ರಕಟಿಸುವ ಹಿನ್ನೆಲೆಯಲ್ಲಿ 'ಶ್ರೀರಾಮ ಪಬ್ಲಿಕೇಶನ್ಸ್' ಹೆಸರಿನ ಪುಟ್ಟ ಪ್ರಕಾಶನ ಸಂಸ್ಥೆಯನ್ನು ಆರಂಭಿಸಲಾಯಿತು. ಪತ್ರೀಜಿಯವರ ಮತ್ತು ತಟವರ್ತಿ ವೀರರಾಘವರಾವ್ ರವರ ಆದೇಶದ ಮೇರೆಗೆ ನಮ್ಮ ಪ್ರಕಾಶನದ ವತಿಯಿಂದ ಕೆಲವು ಆಧ್ಯಾತ್ಮಿಕ ಪುಸ್ತಕಗಳನ್ನು ಪ್ರಕಟಿಸಲಾರಂಭಿಸಿದೆವು. ಕೆಲವು ಪುಸ್ತಕಗಳನ್ನು ಕನ್ನಡಕ್ಕೆ ಅನುವಾದಿಸಿ ಮುದ್ರಿಸಲಾಯಿತು. ಕೆಲವು ತೆಲುಗು ಪುಸ್ತಕಗಳನ್ನು ಮರುಮುದ್ರಣ ಮಾಡಲಾಯಿತು. ತೆಲುಗಿನ ಉತ್ತಮ ಪುಸ್ತಕಗಳು ಕನ್ನಡದ ಆಧ್ಯಾತ್ಮ ಸಾಧಕರಿಗೂ ದೊರಕಲೆಂದು ನಾವು ಇಂತಹ ಪ್ರಯತ್ನ ಮಾಡಿದ್ದೇವೆ.

ತಮ್ಮ ವಿಶ್ವಾಸಿಗಳು,

**ಎಚ್.ಎನ್.ಶ್ರೀನಿವಾಸ**
ಮತ್ತು
**ಎಸ್.ಎನ್.ವಿಜಯಲಕ್ಷ್ಮಿ**
**ಸಂಸ್ಥಾಪಕರು,**
ಶ್ರೀರಾಮಧಾಮ ಧ್ಯಾನಕೇಂದ್ರ

# ಮಹಾತ್ಮರ ಸಂದೇಶಗಳು

ಮಹಾಯೋಗಿಗಳೆಲ್ಲಾ ಎಷ್ಟೋ ಕಷ್ಟಪಟ್ಟಿದ್ದಾರೆ. ಉತ್ತಮ ಸಾಧನೆಗಳನ್ನು ಮಾಡಿ, ಸತ್ಯವನ್ನು ತಿಳಿದುಕೊಂಡರು, ಮಾನವನ ದುಃಖಕ್ಕೆ ಕಾರಣಗಳನ್ನು ತಿಳಿದುಕೊಂಡರು, ದುಃಖದಿಂದ ಹೊರಬರುವ ಮಾರ್ಗವನ್ನು ತಿಳಿದುಕೊಂಡರು. ಅದನ್ನೇ ಎಲ್ಲರಿಗೂ ಬೋಧಿಸಿದರು.

ಅವರ ಬೋಧನೆಯೊಂದರ ಸಾರವನ್ನು ಗ್ರಹಿಸಿ ಆಚರಿಸಿದರೆ ಯಾರಿಗಾಗಲಿ ದುಃಖವೇ ಬರದು, ಬಂದ ದುಃಖವು ಸಹ ಸುಲಭವಾಗಿ ಹೋಗುತ್ತದೆ. ಅನೇಕ ಸಮಸ್ಯೆಯಿಂದ ಆಗುವ ಬಾಧೆಯನ್ನು ದುಃಖವೆಂದು ಹೇಳುತ್ತಾರೆ.

1. ಮುಖ್ಯವಾಗಿ ಯಾರನ್ನು ನೋಡಿದರೂ ಆರೋಗ್ಯ ಸಮಸ್ಯೆಗಳು ಇವೆ.
2. ಭರಿಸಲಾಗದ ಆರ್ಥಿಕ ಸಮಸ್ಯೆಗಳು ಇವೆ.
3. ಕುಟುಂಬ ಸಮಸ್ಯೆಗಳು ಇವೆ.
4. ಸಂಸಾರ ಸಮಸ್ಯೆಗಳು ಅಂದರೆ ಗಂಡ–ಹೆಂಡತಿಯ ಮಧ್ಯೆ ಇರುವ ಸಮಸ್ಯೆಗಳು ಇವೆ.
5. ಅಕ್ಕ ಪಕ್ಕದವರೊಡನೆ ಸಮಸ್ಯೆಗಳು
6. ವೃದ್ಧಾಪ್ಯದ ಸಮಸ್ಯೆಗಳು ಅಂದರೆ ಮುಪ್ಪಿನಲ್ಲಿ ಬರುವ ಸಮಸ್ಯೆಗಳು ಇವೆ.
7. ಯಾರಿಗೂ ತಿಳಿಯದ ಇನ್ನೊಂದು ಸಮಸ್ಯೆ ಏನೆಂದರೆ? ಮರಣಾನಂತರ ಜೀವನದ ಸಮಸ್ಯೆಗಳು.

ಪ್ರತಿ ಮಾನವನಿಗೂ ಇಷ್ಟು ರೀತಿಯ ಸಮಸ್ಯೆಗಳಿವೆ. ಯಾರಾದರೂ ಸಮಸ್ಯೆಗಳಿದ್ದರೆ ಸಹಿಸಿಕೊಳ್ಳಲಾರರು. ಸಮಸ್ಯೆಗಳು ತೀವ್ರವಾಗಿ ಇದ್ದರೆ ಆತ್ಮಹತ್ಯೆ ಮಾಡಿಕೊಳ್ಳುವುದಕ್ಕೆ ಕೂಡಾ ಹಿಂದೇಟು ಹಾಕುವುದಿಲ್ಲ.

ಇಷ್ಟು ಸಮಸ್ಯೆಗಳಿಂದ ಕಂಗಾಲಾಗುತ್ತಿರುವ ಮಾನವನನ್ನು ಹೊರತರುವದಕ್ಕೆ ಯೋಗಿಗಳು ಅವರ ಜೀವನವನ್ನೇ ತ್ಯಾಗ ಮಾಡಿದರು. ಮಾನವರು ಹೇಗೆ ಜೀವಿಸಿದರೆ ಸಮಸ್ಯೆಗಳಿಂದ ಹೊರಬಂದು ಸಂತೋಷದಿಂದ ಜೀವಿಸಬಲ್ಲರು ಎನ್ನುವುದು ತಿಳಿದುಕೊಂಡು, ಎಷ್ಟೋ ವಿಷಯಗಳನ್ನು ಮಾನವರಿಗೆ ಬೋಧಿಸಿದರು.

ಹಾಗೆ ಅವರು ಅನುಭವಪೂರ್ವಕವಾಗಿ ಹೊಂದಿದ ಜ್ಞಾನವನ್ನೆ ನಮ್ಮೆಲ್ಲರಿಗೆ ಬೋಧಿಸಿದರು. ಅಂತಹವರು ಬೋಧಿಸಿದ್ದನ್ನು ಅಷ್ಟು ಹಗುರವಾಗಿ ತೆಗೆದು ಹಾಕುವಂತಹ ವಿಷಯವಲ್ಲ, ಅವರು ಏನು ಹೇಳಿದ್ದಾರೆಂದರೆ **"ನೀನು ಈ ಪ್ರಪಂಚವನ್ನು ಬಿಟ್ಟು ಹೋಗುವಾಗ ಹಣವು ನಿನಗೆ ಏನು ಉಪಯೋಗಕ್ಕೆ ಬಾರದು, ಹಾಗೆಯೇ ಧನವು ಭಗವಂತನ ಬಳಿಗೆ ನಿನ್ನನ್ನು ಸೇರಿಸುವುದಿಲ್ಲ," "ಧನವು, ಸಂಪತ್ತು ಭಗವಂತನನ್ನು ಹೊಂದುವ ಮಾರ್ಗದಲ್ಲಿ ಅವರೋಧಗಳನ್ನೇ ಉಂಟು ಮಾಡುತ್ತವೆ"** ಎಂದಿದ್ದಾರೆ.

ಈ ಆಧ್ಯಾತ್ಮಿಕ ಮಾರ್ಗದಲ್ಲಿ ಮಹಾತ್ಮರು ಧನವನ್ನು ಕುರಿತು ಎಷ್ಟು ಹೇಳಿದ್ದಾರೊ ಒಂದು ಸಾರಿ ಆಲೋಚಿಸಿರಿ. ಅವರು ಏನು ಹೇಳಿದ್ದಾರೆಂದರೆ ಹಣವು ಏನು ಉಪಯೋಗಕ್ಕೆ ಬಾರದು. ಮೇಲಾಗಿ ಈ ಮಾರ್ಗದಲ್ಲಿ ಈ ಧನವು ಅವರೋಧವನ್ನೇ ಉಂಟು ಮಾಡುತ್ತವೆ ಎಂದು ಹೇಳಲಾಗಿದೆ.

ಈಗ ನಾವೆಲ್ಲಾ ಕೂಡಾ ಆಧ್ಯಾತ್ಮಿಕ ಮಾರ್ಗದಲ್ಲಿ ಬೆಳೆಯುವುದಕ್ಕೆ ಪ್ರಯತ್ನಿಸುತ್ತಿದ್ದೇವೆ, ಅಂದರೆ ದುಃಖವನ್ನು ತೊಲಗಿಸಿಕೊಳ್ಳುವ ಪ್ರಯತ್ನವನ್ನು ಮಾಡುತ್ತಿದ್ದೇವೆ. ಮತ್ತೆ ದುಃಖವು ಹೊಗಬೇಕೆಂದರೆ ಅಷ್ಟು ರೀತಿಯ ಸಮಸ್ಯೆಗಳಿಂದ ಹೊರಬರಬೇಕು.

ನೀವು ಮಹಾತ್ಮರನ್ನು ಯಾರನ್ನಾಗಲಿ ಗಮನಿಸಿದರೆ, ಈ ಮಾರ್ಗದಲ್ಲಿ ಬಂದ ನಂತರ ಹಣವನ್ನು ಬಿಟ್ಟುಬಿಡುತ್ತಾರೆ. ಅಂದರೆ ಸಂಪಾದನೆಯ ಮೇಲೆ ದೃಷ್ಟಿ ಇಡುವುದಿಲ್ಲ. ಅವರಿಗೆ ಗೊತ್ತು, ತಕ್ಷಣವೇ ಬಿಟ್ಟರೆ ಕೆಲವು ತೊಂದರೆಗಳು ಎದುರಾಗುತ್ತವೆ ಎಂದು, ಆದರೂ ಸರಿ ಲೆಕ್ಕಕ್ಕೆ ಇಡರು. ಹಾಗೆ ಪತ್ರೀಜಿಯವರನ್ನು ಗಮನಿಸಿದರೆ, ಅವರು ಉದ್ಯೋಗಕ್ಕೆ ರಾಜೀನಾಮೆ ಕೊಟ್ಟರು. ಅವರಿಗೆ ಸಂಬಳವೇ ಆಧಾರ, ಆದರು ಸರಿ ಲೆಕ್ಕಿಸಲಿಲ್ಲ.

ಧನವೆನ್ನುವುದು ಈ ಮಾರ್ಗದಲ್ಲಿ ಅವರೋಧವೆ, ಆಟಂಕವೆ, ಅಡ್ಡಿಯೆ ಎಂದು ಆತನಿಗೆ ಗೊತ್ತು. ಪತ್ರೀಜಿಯವರ ಪರಿಚಯವಾದ ಮೇಲೆ ನಾನು ಆತ್ಮವೆಂದು ತಿಳಿದುಕೊಂಡ ನಂತರೆ, ನನಗೆ ಬೇಕಾಗಿದ್ದು ಜ್ಞಾನವೆಂದು ತಿಳಿದುಕೊಂಡೆನು. ಜ್ಞಾನವನ್ನು ಸಂಪಾದಿಸುವುದಕ್ಕೆ ಈ ಧನವೆನ್ನುವುದು, ಅವರೋಧವು, ಆಟಂಕವು ಎನ್ನುವುದು ನನಗೂ ಕೂಡಾ ಅರ್ಥವಾಯಿತು. ಆದ್ದರಿಂದ ನನ್ನ ವ್ಯಾಪಾರಗಳನೆಲ್ಲಾ ಬಿಟ್ಟುಬಿಟ್ಟೆನು.

ನಾನು ವ್ಯಾಪಾರ ಮಾಡಿದರೆ ಸಮಯವನ್ನೆಲ್ಲಾ ಸಂಪಾದನೆಗೆಂದೇ ಇಡಬೇಕಾಗುತ್ತಿತ್ತು. ನಾನು ಬೆಳಿಗ್ಗೆ 8.00 ರಿಂದ ರಾತ್ರಿ 10, 11 ಗಂಟೆಯವರೆಗೂ ವಿವಿಧ ರೀತಿಯ ವ್ಯಾಪಾರಗಳನ್ನು ಮಾಡುತ್ತಿದ್ದೆನು. ಎಲ್ಲಿಯೂ ಖಾಲಿ ಇರುತ್ತಿರಲಿಲ್ಲ. ಮತ್ತೆ ಖಾಲಿ ಇಲ್ಲದೆ ಧನದ ಮೇಲೆ ದೃಷ್ಟಿ ಇಟ್ಟರೆ ಜ್ಞಾನವನ್ನು ಎಲ್ಲಿ ಸಂಪಾದಿಸುತ್ತೇವೆ? ಆದ್ದರಿಂದ ಲಾಭವಿಲ್ಲವೆಂದು ಎಲ್ಲಾ ವ್ಯಾಪಾರಗಳನ್ನು ಮುಚ್ಚಿಬಿಟ್ಟೆನು. ನನ್ನ ಅಭಿಪ್ರಾಯ ಒಂದು ಗಂಟೆಯ ಸಂಪಾದನೆಯ ಮೇಲೆ ಇದ್ದರೆ ಆ ಗಂಟೆಯ ಜ್ಞಾನ ಸಂಪಾದನೆ ನಿಂತುಬಿಡುತ್ತದೆ.

ಅಲ್ಲಿಗೆ ನಾನು 53 ವರ್ಷಗಳು ವ್ಯರ್ಥ ಮಾಡಿದ್ದೇನೆ, ಇನ್ನೇನು ವ್ಯರ್ಥ ಮಾಡುತ್ತೇನೆ? ನನಗೆ ಅವಶ್ಯಕತೆಗಿಂತ ಹೆಚ್ಚಾಗಿಯೇ ಇದೆ, ಆದ್ದರಿಂದ ತಕ್ಷಣವೇ ವ್ಯಾಪಾರಗಳನ್ನೆಲ್ಲಾ ಬಿಟ್ಟುಬಿಟ್ಟೆನು.

ಅಷ್ಟೇ ಅಲ್ಲ, ಸಂಸಾರವನ್ನು ಕುರಿತು ಸಹಾ ಎಷ್ಟೋ ಸಮಯವನ್ನು ವ್ಯಯಿಸುತ್ತಿದ್ದೆ, ಅದಕ್ಕೆ ಮಕ್ಕಳನ್ನು ಹೊರಗಡೆ ಕಳುಹಿಸಿಬಿಟ್ಟೆನು. ಪದವಿಗಳನ್ನು ಬಿಟ್ಟೆನು, ಸ್ನೇಹಿತರು, ಬಂಧುಗಳು, ಸಮಾರಂಭಗಳನ್ನು ಪಾರ್ಟಿಗಳಿಗೆ ಹೋಗುವುದನ್ನು ಬಿಟ್ಟೆನು. ಅವೆಲ್ಲವು ನನ್ನ ಜ್ಞಾನ ಸಂಪಾದನೆಗೆ ಅವರೋಧಗಳಾಗಿಯೇ ಇದ್ದವು.

ಹಾಗೆ ಮಾಡಿದಾಗಲೆ ನನ್ನ ಸಮಯವನ್ನು ಶೇ 100% ಜ್ಞಾನ ಸಂಪಾದನೆಗಾಗಿಯೇ ಉಪಯೋಗಿಸುವುದಕ್ಕೆ ಸಾಧ್ಯವಾಯಿತು. ಇಲ್ಲದಿದ್ದರೆ ಈ ಸ್ಥಾಯಿಗೆ ಬರುತ್ತಿರಲಿಲ್ಲವೇನೊ? ಪತ್ರೀಜಿಯವರು ಒಂದು ಸಂದರ್ಭದಲ್ಲಿ ಏನೆಂದು ಹೇಳಿದರೆಂದರೆ? ನೀನು ಯಾವುದರಲ್ಲಿ ಚಾಂಪಿಯನ್ ಆಗಬೇಕೆಂದು ಕೊಳ್ಳುವೆಯೋ ನಿರ್ಣಯಿಸಿಕೊಂಡು ಅದರ ಮೇಲೆಯೇ ದೃಷ್ಟಿ ಇಡು ಎಂದರು. ಆತನು ಕೂಡಾ ಅದೇ ಕೆಲಸ ಮಾಡಿದನು. ಮತ್ತೆ ನಾನು 20 ವರ್ಷಗಳಿಂದ ಅದೇ ಕೆಲಸ ಮಾಡಿದರೆ ಬೆಳೆಯದೆ ಇರುತ್ತೇನೆಯೆ? ಯಾರಾದರೂ ಬೆಳೆಯುತ್ತಾರೆ.

ಬಹಳ ಮಂದಿ ಏನೇನ್ನುತ್ತಾರೆ ಎಂದರೆ? ನಾವು ಅದು ಮಾಡುತ್ತಿದ್ದೇವೆ, ಇದು ಮಾಡುತ್ತಿದ್ದೇವೆ ಎನ್ನುತ್ತಾರೆ. ನಾವು ಸಂಸಾರ ಮಾಡಿಕೊಳ್ಳುತ್ತಾ, ಸಂಪಾದನೆ ನೋಡಿಕೊಳ್ಳುತ್ತಾ ಪದವಿಗಳನ್ನು ನೋಡಿಕೊಳ್ಳುತ್ತಾ ಈ ಮಾರ್ಗದಲ್ಲಿ ಇದ್ದೇವೆ ಎನ್ನುತ್ತಾರೆ.

ಇರಬಹುದು, ಅವರಿಷ್ಟ ಅವರಿಗೆ, ಯಾರದ್ದು ತಪ್ಪಿಲ್ಲ. ಆದರೆ ಜ್ಞಾನ ಸಂಪಾದನೆಯ ಮೇಲೆ ನೀನು 10% ದೃಷ್ಟಿ ಇಟ್ಟರೆ 10% ಜ್ಞಾನ, 50% ದೃಷ್ಟಿ ಇಟ್ಟರೆ 50%

ಜ್ಞಾನವೇ ಬರುತ್ತದೆ. 90% ಗಮನವಿಟ್ಟಾಗ 90% ಜ್ಞಾನ ಬರುತ್ತದೆ. ಆದ್ದರಿಂದ ಮೊದಲು ನಾವು ನಿರ್ಧಾರ ಮಾಡಿಕೊಳ್ಳಬೇಕು.

ಅಸಲು ಮೊದಲು ತಿಳಿದುಕೊಳ್ಳಬೇಕಾಗಿರುವುದು ನಾವು ಯಾರು? ನಮಗೆ ಬೇಕಾದದ್ದು ಏನು? ಯಾವುದು ನಮಗೆ ಉಪಯೋಗಕ್ಕೆ ಬರುತ್ತದೆ? ಯಾವುದು ನಮಗೆ ಲಾಭವನ್ನುಂಟು ಮಾಡುತ್ತದೆ?

ಅಷ್ಟೇ ಅಲ್ಲ ಯಾವುದು ಇಹಪರದಲ್ಲಿ ಲಾಭಿಸುತ್ತದೆ ಎನ್ನುವುದನ್ನು ಮೊದಲು ನಾವು ತಿಳಿದುಕೊಳ್ಳಬೇಕು. ಮತ್ತೆ ಇಹದಲ್ಲಿ, ಪರದಲ್ಲೂ ಲಾಭ ತರುವುದು ಜ್ಞಾನ ಒಂದೇ! ಆದರೆ ಧನವು ಇಹದಲ್ಲಿ ಮಾತ್ರವೇ ಉಪಯೋಗಕ್ಕೆ ಬರುತ್ತದೆ, ಆದರೆ ಪರಕ್ಕೆ ಬಾರದು, ಉಪಯೋಗವಿಲ್ಲ ಕೂಡಾ.

ಸಾಧಾರಣವಾಗಿ ನಾವು ಈ ಭೂಮಿಯನ್ನು ಇಹಲೋಕವೆಂದು ಹೇಳಿಕೊಳ್ಳುತ್ತಾ ಇರುತ್ತೇವೆ, ಕಾಣಿಸದ ಲೋಕಗಳನ್ನು ಪರಲೋಕವೆಂದುಕೊಳ್ಳುತ್ತೇವೆ. ಆದರೆ ಆತ್ಮಗಳಾದ ನಾವು ಯಾವುದನ್ನು ಪರವೆಂದುಕೊಳ್ಳುತ್ತಿದ್ದೇವೆಯೋ ಅದೇ ನಮಗೆ ಇಹವು. ಹಾಗೆಯೇ ಎಲ್ಲರೂ ಯಾವುದನ್ನು ಪರವೆಂದುಕೊಳ್ಳುತಿದ್ದಾರೋ ಅದೇ ನಮಗೆ ಇಹವು. ಅಂದರೆ ಯಾವುದಾದರೆ ಇಹವೆಂದು ಅಂದುಕೊಳ್ಳುತ್ತಿದ್ದೇವೆಯೋ ಅದೇ ನಮಗೆ ಪರವೆಂದು ತಿಳಿದುಕೊಳ್ಳಬೇಕು.

ಉದಾ : ನಾವೆಲ್ಲಾ ಭಾರತ ದೇಶದಲ್ಲಿ ಇರುವವರಲ್ಲವೇ? ಅಂದರೆ ಭಾರತ ದೇಶ ಎನ್ನುವುದು ನಮಗೆ ಸ್ವದೇಶ. ಅಮೇರಿಕಾ ನಮಗೆ ಪರದೇಶ. ಈ ಸ್ವದೇಶದಿಂದ ಅಮೇರಿಕಾ ಅಂದರೆ ಪರದೇಶಕ್ಕೆ ಏಕೆ ಹೋಗುತ್ತೇವೆ?

ಅಲ್ಲಿಗೆ ಹೋಗಿ ಉದ್ಯೋಗ ಮಾಡಿ, ವ್ಯಾಪಾರ ಮಾಡಿ, ಚೆನ್ನಾಗಿ ಸಂಪಾದಿಸಲು, ಸಂಪಾದಿಸಿ ಏನು ಮಾಡುತ್ತಾರೆ? ಸ್ವದೇಶಕ್ಕೆ ಬಂದು ಹೊಲಗದ್ದೆಗಳನ್ನು ಕೊಂಡುಕೊಳ್ಳುತ್ತಾರೆ; ಮನೆ ಕಟ್ಟುತ್ತಾರೆ, ಒಳ್ಳೆಯ ವ್ಯಾಪಾರವನ್ನು ಮಾಡುತ್ತಾರೆ, ಚೆನ್ನಾಗಿ ಸ್ಥಿರವಾಗುತ್ತಾರೆ.

ಕೆಲವರು ಆಸ್ಟ್ರೇಲಿಯಾಗೆ ಹೋಗುತ್ತಾರೆ. ಕೆಲವರು ಲಂಡನ್‌ಗೆ ಹೋಗುತ್ತಾರೆ, ದುಬಾಯಿಗೆ ಹೋಗುತ್ತಾರೆ, ಹೀಗೆ ಅವರ ಇಷ್ಟದಂತೆ ಅವರು ಹೋಗುತ್ತಾರೆ. ಯಾವುದು ಏನಾದರೂ ಪರದೇಶದಲ್ಲಿ ಸಂಪಾದಿಸಿಕೊಂಡು ಬರುವುದಕ್ಕೆ ಹೋಗುತ್ತಾರೆ. ಅಂದರೆ ಸ್ವದೇಶದಲ್ಲಿ ದೊಡ್ಡವರಾಗಲು ಹೋಗುತ್ತಾರೆ.

ಹಾಗೆಯೇ ಆತ್ಮವಾದ ನಾವು ನಮ್ಮ ಸ್ವಲೋಕವಾದ ಆ ಪರಲೋಕದಿಂದ ಭೂಮಿಗೆ ಬಂದಿದ್ದೇವೆ. ಅಂದರೆ ಈಗ ಭೂಮಿ ನಮಗೆ ಪರಲೋಕವಾಯಿತು.

ಆದ್ದರಿಂದ ಇದನ್ನು ಅರ್ಥ ಮಾಡಿಕೊಂಡರೆ? ನೀವೆಲ್ಲಾ ಧ್ಯಾನ ಮಾರ್ಗದಲ್ಲಿ ಏಕೆ ಬರುತ್ತಿದ್ದೇವೆ ಎನ್ನುವುದು ಅರ್ಥವಾಗುತ್ತದೆ. ಸಹಜವಾಗಿ ನಿಮ್ಮನ್ನು ನೋಡಿ ಎಲ್ಲರೂ ಹುಚ್ಚರು ಎಂದುಕೊಳ್ಳಬಹುದು, ಆದರೆ ನಿಮ್ಮನ್ನು ಹುಚ್ಚರೆನ್ನುವವರೇ ಹುಚ್ಚರು.

ಆತ್ಮರಾದ ನೀವು ಭೂಮಿಗೆ ಬಂದಿದ್ದೀರಿ. ಒಂದು ಇಲ್ಲಿ ಶಾಶ್ವತವಾಗಿ ಇದ್ದುಬಿಡುತ್ತೀರಾ? ಅಂದರೆ ಇರುವುದಿಲ್ಲ, ಕೆಲವು ದಿನಗಳು ಮಾತ್ರವೇ ಇರುತ್ತೀರಿ ಮತ್ತೆ ಅಸಲು ಬಂದಿದ್ದು ಏಕೆ? ಅಂದರೆ ಜ್ಞಾನವನ್ನು ಸಂಪಾದಿಸಿಕೊಳ್ಳಲು.

ಆದ್ದರಿಂದ ಆತ್ಮರಾದ ನಾವು ನಮ್ಮ ಸ್ವಲೋಕವಾದಂತಹ ಪರದಿಂದ ಜ್ಞಾನವನ್ನು ಸಂಪಾದಿಸುವುದಕ್ಕೆ ಬಂದಿದ್ದೇವೆ. ಮತ್ತೆ ಪರಕ್ಕೆ ಹೋದಾಗ ಆ ಜ್ಞಾನದಿಂದ ಇನ್ನೂ ಉನ್ನತ ಲೋಕಗಳಿಗೆ ಸೇರಿಕೊಳ್ಳುತ್ತೇವೆ.

ನೋಡಿರಿ, ಹಣ ಸಂಪಾದನೆಗಾಗಿ ಆರೋಗ್ಯ ಚೆನ್ನಾಗಿರಲಿ–ಇಲ್ಲದಿರಲಿ ತಾಳ್ಮೆಯಿರಲಿ–ಇಲ್ಲದಿರಲಿ, ಹೋಗಿ ಸಂಪಾದಿಸುತ್ತಾರೆ. ಹಾಗೆಯೇ ಜ್ಞಾನವನ್ನು ಸಂಪಾದಿಸಬೇಕು. ಹಾಗೆಯೆ ಅಮೇರಿಕಾ ಹೋದವರು ಸ್ವದೇಶಕ್ಕೆ ತಿರುಗಿ ಬಂದಾಗ ಅಲ್ಲಿ ಎಲ್ಲಾ ಬಿಟ್ಟು ಬಂದು ಬಿಡುತ್ತೀರಿ.

ಹಾಗೆಯೇ ಈ ಭೂಮಿ ಪರಲೋಕವೆಂದು ನಮಗೆ ಅರ್ಥವಾದರೆ ಇಲ್ಲಿ ಇರುವವು, ಇದ್ದವರನ್ನು ಬಿಟ್ಟುಬಿಡಲು ಏನೂ ನೋವುಪಡರು. ಯಾರಾದರೂ ಸತ್ತರೂ ಬಾಧೆ ಪಡುವುದಿಲ್ಲ.

ನಮ್ಮ ಮೇಡಂ ಅಮ್ಮನವರಿಗೆ 90 ವರ್ಷ. ಸತ್ತು ಹೋದರು. ಬಾ ಎಂದು ಖರಗ್ ಪೂರ್‌ನಿಂದ ಅಣ್ಣಂದಿರು ಫೋನ್ ಮಾಡಿದರು. ಆಕೆಯು ಏನು ಹೇಳಿದಳೆಂದರೆ, ಈಗ ನಾನು ಹೊರಟುಬಂದರೂ ಅಲ್ಲಿಗೆ ಹೋಗುವುದರೊಳಗೆ ಆಕೆಯನ್ನು ತೆಗೆದುಕೊಂಡು ಹೋಗುತ್ತಾರೆ. ಹೋಗಿ ಏನು ಮಾಡಲಿ? 3 ದಿನಗಳ ತರಗತಿಯು ಮುಗಿದ ಮೇಲೆ ಬರುತ್ತೇನೆ ಎಂದಳೂ. ಇನ್ನೂ ಅವರೊಂದಿಗೆ ಏನೆಂದಳು ಅಂದರೆ, ಅಷ್ಟು ವಯಸ್ಸು ಆದಮೇಲೆ ಹೋಗದೆ ಇರುತ್ತಾಳೆಯೇ? ನೋವು ಪಡಬೇಡಿರಿ ಎಂದು ಹೇಳಿದಳು. ಅದು ಜ್ಞಾನವೆಂದರೆ!

ಭಗವದ್ಗೀತೆಯಲ್ಲಿ ಹೇಳಿದ್ದಾನಲ್ಲಾ?

**ಶ್ಲೋಕ "ಗತಾಸೂ ನಗತಾಸೂಂಶ್ಚ ನಾನು ಶೋಚಂತಿ ಪಂಡಿಂತಾಃ"**

(ಭ.ಗಿ–2–11)

ಮರಣಿಸಿದವನ ಕುರಿತಾಗಲಿ, ಮರಣಿಸುವವನ ಕುರಿತಾಗಲಿ ಯಾರಾದರೆ ಶೋಕಿಸುವುದಿಲ್ಲವೋ ಅವನೇ ಪಂಡಿತನು. ಅಂದರೆ ಜ್ಞಾನದಲ್ಲಿ ಚೆನ್ನಾಗಿ ಹಣ್ಣಾದವನು ಎಂದು ಶ್ರೀ ಕೃಷ್ಣನು ಹೇಳಿದ್ದಾರಲ್ಲ.

ಹಾಗೆಯೇ ತಂದೆ ಹೋಗಬಹುದು, ತಾಯಿ ಹೋಗಬಹುದು, ಗಂಡ ಹೋಗಬಹುದು, ಹೆಂಡತಿ ಹೋಗಬಹುದು, ಮಕ್ಕಳು ಗತಿಸಬಹುದು, ಆದರೆ ಸಾಧಾರಣವಾಗಿ ಇರುವ ಆ ಮಮಕಾರದಿಂದ ಸ್ವಲ್ಪ ಹೊತ್ತು ಬಾಧೆಪಡುವುದೆನ್ನುವುದು ಸಹಜ, ಅಷ್ಟೇ ಹೊರತು, ಶಾಶ್ವತವಾಗಿ ಅಳುತ್ತಾ ಕುಳಿತುಕೊಳ್ಳುವುದು ಎನ್ನುವುದು ಬಹಳ ಮೂರ್ಖತನ, ಅಜ್ಞಾನವೆಂದು ಪತ್ರೀಜಿ ಹೇಳಿದ್ದಾರೆ.

ಆದ್ದರಿಂದ ಧನವೇ ಅಲ್ಲ ಎಲ್ಲವನ್ನು ಬಿಡಬೇಕಾದದ್ದೇ! ಯಾವುದೂ ಕೂಡಾ ಬರುವುದಿಲ್ಲ. ಆತ್ಮರಾದ ನಮಗೆ ಯಾವುದರೊಂದಿಗೆ ಸಂಬಂಧವಿಲ್ಲವೆಂದು ತಿಳಿದುಕೊಳ್ಳಬೇಕು.

ನಾವು ಪರದಲ್ಲಿ ಯಾವುದೋ ಒಂದು ಲೋಕದಿಂದ ಬಂದು, ತಾಯಿ ಗರ್ಭದಲ್ಲಿ ತಯಾರಾಗುವ ಶಿಶುವಿನಲ್ಲಿ ಪ್ರವೇಶಿಸಿದ್ದೇವೆ. ತಾತ್ಕಾಲಿಕವಾಗಿ ಇಲ್ಲಿ ಸೇರಿದ್ದೇವೆ. ಅದಕ್ಕಿಂತಲೂ ಯಾವ ಸಂಬಂಧವೂ ಇಲ್ಲ. ಮತ್ತೆ ಯಾರ ದಾರಿಗೆ ಅವರು ಹೋಗಿಬಿಡುತ್ತಾರೆ.

# ಮೂರು ರೀತಿಯ ಜೀವನಗಳು

ಮಹಾತ್ಮರು ಏನೆಂದಿದ್ದಾರೆಂದರೆ? **"ಮಾನವರಿಗೆ ಮೂರು ರೀತಿಯ ಜೀವನಗಳು ಇರುತ್ತವೆ"** ಎಂದು ಹೇಳಿದ್ದಾರೆ. ಅವು

1.ರಾತ್ರಿ ಜೀವನ 2. ಸಂಧ್ಯಾ ಜೀವನ 3. ಹಗಲು ಜೀವನ ಹಾಗೆ ಮಾನವನ ಜೀವನವನ್ನು, ಜೀವಿಸುವವರನ್ನು ಮೂರು ರೀತಿಯಾಗಿ ವಿಭಜಿಸಿಕೊಳ್ಳಬಹುದು.

ಇಲ್ಲಿ ನೀವು ಗಮನಿಸಿರಿ, ರಾತ್ರಿ ಜೀವನಕ್ಕೆ, ಹಗಲು ಜೀವನಕ್ಕೆ ಮಧ್ಯದಲ್ಲಿ ಇರುವುದನ್ನು ಸಂಧ್ಯಾ ಜೀವನ ಎನ್ನುತ್ತಾರೆ. ಹಾಗೆಯೇ ಹಗಲು ಜೀವನಕ್ಕೆ ರಾತ್ರಿ ಜೀವನಕ್ಕೆ ಮಧ್ಯದಲ್ಲಿ ಇರುವ ಜೀವನವನ್ನು ಕೂಡಾ ಸಂಧ್ಯಾ ಜೀವನ ಎನ್ನುತ್ತಾರೆ. ಒಂದು ರಾತ್ರಿ ಸಂಧ್ಯ, ಎರಡನೆಯದು ಹಗಲು ಸಂಧ್ಯ.

**1. ರಾತ್ರಿ ಜೀವನ :** ಅಂದರೆ ಪೂರ್ತಿಯಾಗಿ ಅಜ್ಞಾನದಲ್ಲಿರುವಂತ ಜೀವನ. ಇಂತಹವರಿಗೆ ಏನೂ ತಿಳಿಯದು, ಏನು ಮಾಡುತ್ತಿದ್ದಾರೊ ತಿಳಿಯದು, ಏನು ಮಾಡಬೇಕೊ ತಿಳಿಯದು, ಏನು ಮಾತನಾಡುತ್ತಿದ್ದಾರೊ ತಿಳಿಯದು, ಏನು ಮಾತನಾಡಬೇಕೊ ತಿಳಿಯದು, ಹಾಗೆಯೇ ಏನು ಆಲೋಚಿಸುತ್ತಿದ್ದಾರೊ ತಿಳಿಯದು, ಏನು ಆಲೋಚಿಸಬೇಕೋ ಕೂಡಾ ತಿಳಿಯದು.

ಇವರು ಎಲ್ಲಾ ವಿಷಯಗಳಲ್ಲಿಯೂ ಪೂರ್ತಿ ವಿರುದ್ಧವಾಗಿ ಜೀವಿಸುತ್ತಾರೆ, ಮಾಡಬಾರದ ಕೆಲಸಗಳನ್ನು ಮಾಡುತ್ತಾರೆ. ಮಾತನಾಡಬಾರದ ಮಾತುಗಳನ್ನು ಮಾತನಾಡುತ್ತಾರೆ, ಆಲೋಚಿಸಿ ಬಾರದವುಗಳನ್ನು ಕೂಡಾ ಆಲೋಚಿಸುತ್ತಿರುತ್ತಾರೆ. ಹೀಗೆ ಮಾಡುವುದರಿಂದ ಮಾಡಿದವುಗಳ ಪರ್ಯಾನುಸಾರವಾಗಿ ಕಷ್ಟಗಳನ್ನು ತಂದುಕೊಳ್ಳುತ್ತಾರೆ, ಸಮಸ್ಯೆಗಳನ್ನು ತಂದುಕೊಳ್ಳುತ್ತಾರೆ, ವಿಪರೀತವಾದ ದುಃಖಕ್ಕೆ ಒಳಗಾಗುತ್ತಾರೆ. ದೊಡ್ಡವರು ಅಂದರೆ ಮಹಾತ್ಮರು ಇಂತಹವರನ್ನು ಏನೆಂದು ಕರೆದಿದ್ದಾರೆಂದರೆ ಕಣ್ಣಿದ್ದು ಕುರುಡರು ಎಂದಿದ್ದಾರೆ.

ಇವರ ಜೀವನದಲ್ಲಿ ಸುಖ ಶಾಂತಿಗಳು ಇರುವುದಿಲ್ಲ. ಏಕೆಂದರೆ ಮಾಡಬೇಕಾದದ್ದು ಮಾಡಿದರೆ ಸುಖವಿರುತ್ತದೆ, ಶಾಂತಿ ಇರುತ್ತದೆ. ವಿರುದ್ಧವಾಗಿ ಮಾಡಿದರೆ ಸುಖವೆಲ್ಲಿರುತ್ತದೆ? ಶಾಂತಿ ಎಲ್ಲಿರುತ್ತದೆ? ಇವರಿಗೆ ಸೃಷ್ಟಿ ನಿಯಮಗಳು

ತಿಳಿಯವು, ಸೃಷ್ಟಿ ಧರ್ಮಗಳು ತಿಳಿಯವು, ಸೃಷ್ಟಿ ಸಿದ್ಧಾಂತಗಳು ಕೂಡಾ ತಿಳಿಯವು. ಸೃಷ್ಟಿಯಲ್ಲಿ ಇವೆಲ್ಲಾ ಇವೆಯೆಂಬ ವಿಚಾರವೂ ಸಹ ತಿಳಿಯದು.

ಎಷ್ಟು ಹೊತ್ತೂ ನನಗೆ ತಿಳಿದದ್ದೆ ಸರಿ, ನಾನು ಮಾಡುತ್ತಿರುವುದೇ ಸರಿ ಎಂದುಕೊಳ್ಳುತ್ತಾರೆ. ಇನ್ನೊಬ್ಬರು ಹೇಳಿದರೂ ಕೇಳುವುದಿಲ್ಲ, ಕೇಳಿಸಿಕೊಳ್ಳುವುದೂ ಇಲ್ಲ. ನನಗಿಂತ ನಿನಗೆ ಹೆಚ್ಚು ಗೊತ್ತೆ? ಎನ್ನುತ್ತಾರೆ. ದೊಡ್ಡವರು, ಮಹಾತ್ಮರು ಹೇಳಿದ ಸಂದೇಶಗಳನ್ನು ಕೇಳರು, ಅರ್ಥ ಮಾಡಿಕೊಳ್ಳಲಾರರು, ಆಚರಿಸರು. ಇವರ ವರ್ತನೆ ಬಹಳ ಮೂರ್ಖತನದಿಂದ ಕೂಡಿರುತ್ತದೆ. ತಾನು ಹಿಡಿದ ಮೊಲಕ್ಕೆ ಮೂರೇ ಕಾಲು ಎನ್ನುವಂತಹವರು. ಇವರಲ್ಲಿ ಬದಲಾವಣೆ ಬರಬೇಕೆಂದರೆ ಬಹಳ ಜನ್ಮಗಳು ತೆಗೆದುಕೊಳ್ಳಬೇಕಾಗುತ್ತದೆ.

2. **ಸಂಧ್ಯಾ ಜೀವನ :** ಇದು 2 ವಿಧಗಳನ್ನು ಹೊಂದಿದೆ.

ಎ) **ಹಗಲು ಸಂಧ್ಯ :** ರಾತ್ರಿ ಹೋಗಿ ಹಗಲು ಬರುತ್ತಿದ್ದೆ, ಇರುವ ಸಂಧ್ಯಾ ಹಗಲು ಸಂಧ್ಯ.

ಬ) **ರಾತ್ರಿ ಸಂಧ್ಯ :** ಹಗಲು ಹೋಗಿ ಮತ್ತೆ ಕತ್ತಲಾಗುತ್ತಿದ್ದರೆ, ಇರುವ ಸಂಧ್ಯ, ರಾತ್ರಿ ಸಂಧ್ಯ.

ಮಾನವರು ಅಜ್ಞಾನದಲ್ಲಿ ಕೆಲವು ಜನ್ಮಗಳು ಕಳೆದ ನಂತರ ಸ್ವಲ್ಪ ಜ್ಞಾನವನ್ನು ಹೊಂದುವ ಪ್ರಯತ್ನ ಮಾಡುತ್ತಾರೆ ಅದಕ್ಕೆ ಬೇಕಾದ ಸಾಧನೆ, ಸ್ವಾಧ್ಯಾಯ, ಸಜ್ಜನ ಸಾಂಗತ್ಯ ಕೂಡಾ ಮಾಡುತ್ತಾರೆ. ಗುರುಗಳ ಬಳಿ ಸ್ವಲ್ಪ ಜ್ಞಾನವನ್ನು ಕೂಡಾ ಕಲಿಯುತ್ತಾರೆ. ಇವರಿಗೆ ಆಸಕ್ತಿ ಇರುತ್ತದೆ, ಆದರೆ ಶ್ರದ್ಧೆ ಇರುವುದಿಲ್ಲ. ಇವರು ಯಾವುದಾದರೂ ಆಧ್ಯಾತ್ಮಿಕ ಕಾರ್ಯಕ್ರಮಕ್ಕೆ ಹೋಗಬೇಕೆಂದುಕೊಳ್ಳುತ್ತಾರೆ. ಆದರೆ ಹೋಗಲಾರರು, ಏನೋ ಅಡ್ಡಿಯಾಗುತ್ತದೆ.

ಮಕ್ಕಳು ಸಂಸಾರ, ಸಮಸ್ಯೆಗಳು ಹೀಗೆ ಎಷ್ಟೋ ಇರುತ್ತವೆ. ಏನು ಮಾಡುತ್ತಾರೆ? ಎಲ್ಲಾ ಮಾಡಬೇಕೆಂದುಕೊಳ್ಳುತ್ತಾರೆ, ಆದರೆ ಏನೂ ಮಾಡಲಾರರು. ತಿಳಿಯದೆ ಎಂದರೆ ಎಲ್ಲಾ ತಿಳಿದಿದೆ, ಆದರೆ ಆಚರಿಸಲಾರರು. ಸುಮ್ಮನೆ ಮಾಡಬೇಕು, ಹೋಗಬೇಕು ಎಂದು ಅಂದುಕೊಳ್ಳುತ್ತಾರಷ್ಟೆ. ಇವರು ಅಂದುಕೊಳ್ಳುವುದರಿಂದಲೆ ಸರಿಮಾಡಿಕೊಳ್ಳುತ್ತಾರೆ. ನಿಮಗೆ ನೀವು ಗಮನಿಸಿಕೊಂಡರೆ ನೀವು ಯಾವ ಸ್ಥಾಯಿಯಲ್ಲಿ ಇದ್ದಿರೋ ನಿಮಗೆ ಅರ್ಥವಾಗುತ್ತದೆ.

ಮಹಾತ್ಮರು ಸುಮ್ಮನೆ ಹೇಳುವುದಿಲ್ಲರಿ, ಅವರು ನಮ್ಮೆಲ್ಲರನ್ನು ಕಾಯಿಸಿ

ಸೋಸಿಬಿಟ್ಟಿದ್ದಾರೆ. ಸಂಧ್ಯಾ ಜೀವನದಲ್ಲಿದ್ದವರ ಜೀವನ ಹೇಗೆ ಇರುತ್ತದೆ ಎಂದರೆ? ಜ್ಞಾನವನ್ನು ತಿಳಿದುಕೊಳ್ಳುತ್ತಾರೆ ಆದರೆ ಆಚರಿಸರು.

1. ನೀನು ಯಾರು ಅಂದರೆ? ಆತ್ಮನು ಎಂದು ಹೇಳುತ್ತಾರೆ. ಆದರೆ ಆತ್ಮ ಎನ್ನುವಂತೆ ಜೀವಿಸುವುದಿಲ್ಲ. ಬಹಳಷ್ಟು ಜನ ನಾನು ಆತ್ಮನು ಎಂದು ಕೇಳಿಸಿಕೊಳ್ಳುತ್ತಾರೆ. ಆದರೆ ಮನೆಗೆ ಹೋದ ಮೇಲೆ ಆತ್ಮನೆನ್ನುವಂತೆ ಜೀವಿಸುತ್ತಿದ್ದಾರೆ? ಎಂದರೆ ಇಲ್ಲವೆಂದೆ ಹೇಳುತ್ತಾರೆ. ಅಂದರೆ ಸಂಧ್ಯಾ ಜೀವನದಲ್ಲಿ ಇದ್ದಂತೆಯೆ. ಕೇಳಿದ್ದನ್ನು ಆಚರಿಸಿದರೆ ಹಗಲು ಜೀವನ. ಕೇಳಿದರೂ, ತಿಳಿದುಕೊಂಡರೂ ಆಚರಿಸದಿದ್ದರೆ ಸಂಧ್ಯಾ ಜೀವನ. ಕೇಳಿದರೂ ಅರ್ಥವಾಗಲಿಲ್ಲ ಅಂದರೆ ಅವರದು ರಾತ್ರಿ ಜೀವನ.

2. ವಿಗ್ರಹರಾಧನೆ ಮಾಡಬಾರದು ಅಂದರೆ ಸರಿ ಎನ್ನುತ್ತಾರೆ. ಆದರೆ ಮಾಡುತ್ತಲೇ ಇರುತ್ತಾರೆ. ವಿಗ್ರಹ ನೋಡಿದ ತಕ್ಷಣ ದೂರವಾಗಿದ್ದ ಕೈಗಳು ಕೂಡಾ ಹತ್ತಿರಕ್ಕೆ ಬಂದು ಬಿಡುತ್ತವೆ. ಆದರೆ ವಿಗ್ರಹ ದೇವರೇ ಅಂದರೆ? ಅಲ್ಲ ಎನ್ನುತ್ತಾರೆ. ದೇವರು ಯಾರು ಎಂದರೆ ಆತ್ಮ ಎನ್ನುತ್ತಾರೆ. ಇವರದು ಸಂಧ್ಯಾ ಜೀವನ.

3. ಧ್ಯಾನವೆಂದರೆ **"ಶ್ವಾಸದ ಮೇಲೆ ಗಮನ"** ಎಂದೂ ಬೋರ್ಡ್ ಮೇಲೆ ಬರೆಯುತ್ತಾರೆ. ಆದರೆ ಮಾಡುವುದು ಮ್ಯೂಜಿಕ್ ಮೇಲೆ ಧ್ಯಾನ. ಗೈಡಿಂಗ್ ಧ್ಯಾನ,. ಇವರದು ಸಂಧ್ಯಾ ಜೀವನ.

4. ಬೆಳಿಗ್ಗೆಯೇ ಏದ್ದೇಳಬೇಕು ಎಂದುಕೊಳ್ಳುತ್ತಾರೆ. ಏಳಲಾರರು.

5. ಭೀಮವರಂ ಬರಬೇಕೆಂದುಕೊಳ್ಳುತ್ತಾರೆ. ಆದರೆ ಬರಲಾರರು. ಕೆಲವರು ಆರು ವರ್ಷದಿಂದ ಬರಬೇಕೆಂದುಕೊಳ್ಳುತ್ತೇವೆ, ಆದರೆ ಬರಲಾರದೆ ಇದ್ದೇವೆ ಎನ್ನುತ್ತಾರೆ.

6. ಜೂಮ್‌ನಲ್ಲಿ ವಿಡಿಯೊ ಆನ್ ಮಾಡಬೇಕೆಂದುಕೊಳ್ಳುತ್ತಾರೆ, ಆದರೆ ಮಾಡಲಾರರು.

7. ಗುರುಗಳೊಂದಿಗೆ ಮಾತನಾಡಬೇಕೆಂದುಕೊಳ್ಳುತ್ತಾರೆ, ಮಾತನಾಡಲಾರರು.

8. ಧ್ಯಾನವನ್ನು ಚೆನ್ನಾಗಿ ಮಾಡಬೇಕೆಂದುಕೊಳ್ಳುತ್ತಾರೆ. ಆದರೆ ಮಾಡಲಾರರು.

9. ಪುಸ್ತಕಗಳನ್ನು ಓದಬೇಕೆಂದುಕೊಳ್ಳುತ್ತಾರೆ, ಓದಲಾರರು. ಇಂತಹವರೆಲ್ಲಾ ಸಂಧ್ಯಾ ಜೀವನದಲ್ಲಿದ್ದಂತೆಯೆ!

ಈ ಸಂಧ್ಯಾ ಜೀವನದಲ್ಲಿ ಇರುವವರೆಲ್ಲಾ ಹಗ್ಗವನ್ನು ನೋಡಿ ಹಾವು ಎಂದು ಅಂದುಕೊಳ್ಳುತ್ತಾರೆ. ಕತ್ತಲಲ್ಲಿ ಹೋಗುವ ದಾರಿಯಲ್ಲಿ ಒಂದು ಹಗ್ಗ ಬಿದ್ದಿದೆ, ಪೂರ್ತಿ

ಬೆಳಕೂ ಅಲ್ಲ, ಪೂರ್ತಿ ಕತ್ತಲೂ ಅಲ್ಲ. ಆ ಹಗ್ಗವು ತಿರುಚಿಕೊಂಡಿದೆ. ಇವರಿಗೆ ಬಹಳ ಅನುಮಾನ ಬರುತ್ತಿದೆ. ಅದು ಹಗ್ಗವೇ? ಹಾವೇ? ಕದಲುತ್ತಿಲ್ಲ ಆದರೆ ಹಾವಿನಂತೆಯೇ ಇದೆ. ಅಪ್ಪಿತಪ್ಪಿ ಹತ್ತಿರಕ್ಕೆ ಹೋದರೆ ಕದಲುತ್ತದೆನೊ! ಎಂದು ಇವರು ಬಹಳ ದ್ವಂದ್ವಗಳಲ್ಲಿ ಇರುತ್ತಾರೆ. ಅಂತಹವರ ಜೀವನ ಸಂಧ್ಯಾ ಜೀವನ.

ಬಿಸಿಲುಗಾಲದಲ್ಲಿ ರಸ್ತೆಯಲ್ಲಿ ಓಡುವ ಬಿಸಿಲು ಕುದುರೆಗಳನ್ನು ನೋಡಿ ನೀರು ಎಂದುಕೊಳ್ಳುತ್ತೇವೆ. ಹತ್ತಿರ ಬರುವವರೆಗೂ ಕೂಡಾ ಅರ್ಥವಾಗುವುದಿಲ್ಲ. ಇಂತಹವರೆಲ್ಲಾ ಸಂಧ್ಯಾ ಜೀವನ. ಗೊತ್ತಿಲ್ಲವೇ? ಅಂದರೆ ಗೊತ್ತು, ಆಚರಿಸುತ್ತಾರಾ? ಅಂದರೆ ಆಚರಿಸರು.

**3. ಹಗಲು ಜೀವನ :** ಇದು ಸಂಪೂರ್ಣವಾಗಿ ಜ್ಞಾನವನ್ನು ಹೊಂದಿದ ಜೀವನ, ಇವರ ಜೀವನ ಹಗಲು ಜೀವನ. ಇವರು ಪೂರ್ಣವಾಗಿ ಜ್ಞಾನಿಗಳಾಗುತ್ತಾರೆ, ಮಾಡಬೇಕಾದ್ದನ್ನು ಮಾಡುತ್ತಾ ಇರುತ್ತಾರೆ. ಮಾತನಾಡಬೇಕಾದವುಗಳನ್ನೇ ಮಾಡುತ್ತಾರೆ, ಆಲೋಚಿಸಬೇಕಾದವುಗಳನ್ನೇ ಆಲೋಚಿಸುತ್ತಾ ಇರುತ್ತಾರೆ, ಸರಿಯಾದ ರೀತಿಯಲ್ಲಿ ಜೀವಿಸುತ್ತಾರೆ.

ಇವರ ಜೀವನವೆಲ್ಲಾ ಇವರಿಗೆ ಲಾಭವನ್ನುಂಟು ಮಾಡುತ್ತದೆ, ಇವರ ಜ್ಞಾನ ಹೀಗೆ ಅಪಾರವಾಗಿ ಬೆಳೆಯುವುದರಿಂದ ಇವರು ಕರ್ಮಗಳನ್ನು ಕೂಡಾ ದಗ್ಧ ಮಾಡಿಕೊಳ್ಳುತ್ತಾರೆ, ಕರ್ಮಗಳು ಯಾವಾಗಾದರೆ ಇಲ್ಲವೋ ಮೋಕ್ಷವನ್ನು ಕೂಡಾ ಹೊಂದುತ್ತಾರೆ. ಈಗ ನಮ್ಮವರು ಬಹಳ ಜನ ಈ ಸ್ಥಾಯಿಯಲ್ಲಿ ಇದ್ದಾರೆ.

ಈ ಮೂರು ರೀತಿಯವರನ್ನು ಪತ್ರೀಜಿಯವರು ಏನೆಂದಿದ್ದಾರೆಂದರೆ? ಅಜ್ಞಾನ ಅಂದರೆ ರಾತ್ರಿ ಜೀವನದಲ್ಲಿ ಇರುವವರು, ಅಲ್ಪಜ್ಞರು ಅಂದರೆ ಸಂಧ್ಯಾ ಜೀವನದಲ್ಲಿ ಇರುವವರು, ವಿಜ್ಞಾನ ಅಂದರೆ ಹಗಲು ಜೀವನದಲ್ಲಿ ಇರುವವನು ಎಂದಿದ್ದಾರೆ. ಅಂದರೆ ಇಲ್ಲಿ ಪತ್ರೀಜಿಯವರು ಹೇಗೆ ಉದಾಹರಿಸಿದ್ದಾರೆಂದರೆ ಪೂರ್ತಿಯಾಗಿ ಅಜ್ಞಾನದಲ್ಲಿರುವವರು, ಸ್ವಲ್ಪ ಅಜ್ಞಾನವನ್ನು ತೊಲಗಿಸಿಕೊಂಡು ಸ್ವಲ್ಪ ಜ್ಞಾನವನ್ನು ಹೊಂದುತ್ತಿರುವವರು, ಮೂರನೇ ರೀತಿಯು ಪೂರ್ತಿ ಜ್ಞಾನವನ್ನು ಸಂಪಾದಿಸಿಕೊಂಡವರು.

ಏಕೆಂದರೆ ನಾವೆಲ್ಲರೂ ಕೂಡಾ ಜ್ಞಾನ ಮಾರ್ಗದಲ್ಲಿ ಇದ್ದೇವೆ. ಪ್ರತಿಯೊಬ್ಬರೂ ವಿವಿಧ ರೀತಿಯ ಹಂತಗಳಿರುತ್ತೇವೆ, ಖಚಿತವಾಗಿ ಎಲ್ಲರೂ ಬೆಳೆಯುತ್ತಾರೆ, ಆದರೆ

ಅವರ ಶ್ರದ್ಧೆಯನ್ನಾಧರಿಸಿ ಇರುತ್ತದೆ. ಸುಮ್ಮನೆ ಒಂದು ಬಾರಿಗೇ ಒಟ್ಟು ಜ್ಞಾನವು ಹೇಗೆ ಬರುತ್ತದೆ? ಅದಕ್ಕೆ ಕಷ್ಟಪಡಬೇಕು, ಕೃಷಿ ಮಾಡಬೇಕು.

ಪತ್ರೀಜಿಯವರು ಅಜ್ಞಾನವನ್ನು ತೊಲಗಿಸಿಕೊಂಡು ಜ್ಞಾನವನ್ನು ಹೊಂದಬೇಕೆಂದರೆ ಮೂರು ಆಧ್ಯಾತ್ಮಿಕ ತ್ರಿರತ್ನಗಳನ್ನು ಹೇಳಿದ್ದಾರೆ. ಅವು 1. ಸಾಧನೆ 2. ಸ್ವಾಧ್ಯಾಯ 3. ಸಾಂಗತ್ಯ

ಈ ಮೂರನ್ನು ಹಿಡಿದುಕೊಂಡು ಭೂಮಿಯನ್ನು ಬಿಟ್ಟು ಹೋಗುವ ಮೊದಲೇ ಜ್ಞಾನವನ್ನು ಸಂಪಾದಿಸಿಕೊಳ್ಳಬೇಕು.

ಲೋಕದಲ್ಲಿ ವಿವಿಧ ರೀತಿಯ ಗುಣದವರಿರುತ್ತಾರೆ, ಅವರ ಗುಣವನ್ನಾಧರಿಸಿ ಅವರ ವರ್ತನೆಯು ಆಧಾರವಾಗಿರುತ್ತದೆ. ಎಲ್ಲರ ಗುಣಗಳು ಒಂದೇ ರೀತಿಯಾಗಿ ಇರುವುದಿಲ್ಲ, ಆದ್ದರಿಂದ ಎಲ್ಲರ ವರ್ತನೆ ಒಂದೇ ರೀತಿಯಾಗಿ ಇರುವುದಿಲ್ಲ. ಗುಣಗಳಿಂದ ಈ ವ್ಯತ್ಯಾಸಗಳು ತಪ್ಪದೇ ಇರುತ್ತವೆ.

ಅವರ ವರ್ತನೆಯನ್ನಾಧರಿಸಿ ಅವರು ಯಾವ ಗುಣದಲ್ಲಿ ಇದ್ದಾರೆಂದು ಹೇಳಬಹುದು. ನಿಮ್ಮ ವರ್ತನೆಯನ್ನು ಗಮನಿಸಿದರೆ ನಿಮ್ಮ ಗುಣವು ಅರ್ಥವಾಗುತ್ತದೆ. ಅದನ್ನು ಗಮನಿಸಿ ನಿಮ್ಮನ್ನು ನೀವು ಸರಿಮಾಡಿಕೊಳ್ಳಬಹುದು. ಗುಣವು ಬದಲಾಗಬೇಕೆಂದರೆ ತೀವ್ರ ಧ್ಯಾನ ಸಾಧನೆ ಮಾಡಬೇಕು, ಶಕ್ತಿಯನ್ನು ಅಪಾರವಾಗಿ ಹೆಚ್ಚಿಸಿಕೊಳ್ಳಬೇಕು, ಆಹಾರ ನಿಯಮಗಳನ್ನು ಖಚಿತವಾಗಿ ಪಾಲಿಸಬೇಕು.

ಈ ರೀತಿಯಾಗಿ ಮಾಡುತ್ತಿರುವಾಗ ನಿಮಗೆ ತಿಳಿಯದಂತೆ ನಿಮ್ಮ ಶಕ್ತಿಯು ಬೆಳೆಯುತ್ತದೆ, ನಿಮ್ಮ ಶಕ್ತಿಯು ಬೆಳೆಯುತ್ತಿದ್ದಂತೆ ನಿಮ್ಮ ಮನಸ್ಸು ಶುದ್ಧವಾಗುತ್ತದೆ. ಮನಸ್ಸು ಶುದ್ಧಿಯಾದಷ್ಟು ಗುಣವು ಬದಲಾಗುತ್ತದೆ, ಗುಣವು ಬದಲಾದಂತೆಲ್ಲಾ ಮನುಷ್ಯನ ವರ್ತನೆ ಬದಲಾಗುತ್ತದೆ, ಕೆಲಸಗಳು ಬದಲಾಗುತ್ತವೆ, ಮಾತುಗಳು ಬದಲಾಗುತ್ತವೆ, ಆಲೋಚನಾ ವಿಧಾನ ಬದಲಾಗುತ್ತದೆ.

ಅಂತಹ ಬದಲಾವಣೆಗಳು ಬದಲಾಗುವುದರಿಂದ ರಾಕ್ಷಸನು ಮಾನವನು ಆಗುತ್ತಾನೆ, ಮಾನವನು ಮಹಾತ್ಮನಾಗುತ್ತಾನೆ, ಕೊನೆಗೆ ಮಹಾತ್ಮನು ಪರಮಾತ್ಮನಾಗುತ್ತಾನೆ. ಅದು ಸ್ತ್ರೀ ಆದರೂ, ಪುರುಷನಾದರೂ ಸರಿ.

ಇಂತಹ ಬದಲಾವಣೆಗಳು ಬರದಿದ್ದರೆ ನೀವು ಮಾಡುವ ಧ್ಯಾನವು, ನೀವು ಪಟ್ಟ ಕಷ್ಟವು, ಶ್ರಮ, ಖರ್ಚು ಮಾಡಿದ ಧನ ಎಲ್ಲಾ ವ್ಯರ್ಥವೇ! ಈ ಧ್ಯಾನ ಮಾರ್ಗದಲ್ಲಿ

ಬಂದಿರುವಿರಿ ಅಂದರೆ ಈ ಬದಲಾವಣೆಗಳು ಬಂದೇ ಬರಬೇಕು. ಇಂತಹ ಬದಲಾವಣೆಗಳನ್ನು ನೀವು ಸಾಧಿಸಿದರೆ ಇಹಪರಗಳಲ್ಲಿರುವ ನಿಮ್ಮ ಭವಿಷ್ಯತ್ತು, ಉತ್ತಮವಾಗಿ ಬದಲಾಗಿಬಿಡುತ್ತದೆ, ಬದಲಾಗಬೇಕೂ ಕೂಡಾ.

ನಿಮ್ಮ ಸಾಧನೆಯನ್ನು ಅದೇ ರೀತಿಯಾಗಿ ಮುಂದುವರಿಸಿದರೆ ನಿಮ್ಮ ಕೆಲಸಗಳು ಲೋಕದಲ್ಲಿ ಇದ್ದವರಿಗೆ ಆಶ್ಚರ್ಯವನ್ನುಂಟು ಮಾಡುತ್ತವೆ. ಏನು ಇವನು ಹೀಗೆ ಬದಲಾಗಿ ಹೋದ ಎಂದು ಆಶ್ಚರ್ಯಪಡುತ್ತಾರೆ, ಆಶ್ಚರ್ಯವಾಗಬೇಕು ಕೂಡಾ. ಹೊರಗಿನವರೇ ಅಲ್ಲ, ನಿಮ್ಮ ಮನೆಯಲ್ಲಿದ್ದವರೇ ಆಶ್ಚರ್ಯಪಡುತ್ತಾರೆ. ಇಂತಹ ಬದಲಾವಣೆಗಳನ್ನು ಈ ಕ್ಲಾಸನಲ್ಲಿ ಭಾಗವಹಿಸಿದವರಲ್ಲಿ ಗಮನಿಸಬಹುದು.

ಆರ್ಮೂರು ಜನಾಬಾಯಿ ಮೇಡಂ ರಾತ್ರಿ ಎಲ್ಲಾ ಕುಳಿತು ಧ್ಯಾನವನ್ನು ಮಾಡಿದೆನು ಎಂದು ಹೇಳಿದಳು. ನನ್ನ ದೃಷ್ಟಿ ಎಷ್ಟು ಹೊತ್ತು ಎಲ್ಲರೂ ಚೆನ್ನಾಗಿರಬೇಕು. ಆಕೆಯಂತೆ ಎಲ್ಲರೂ ಮಾಡಬೇಕು, ಎಲ್ಲರೂ ಬೆಳೆಯಬೇಕೆಂದೇ ನನ್ನ ಪ್ರಯತ್ನ. ಎಲ್ಲರೂ ಬದಲಾದರೆ ಪ್ರಪಂಚವೆಷ್ಟು ಬದಲಾಗುತ್ತದೆ? ಅದೇ ಪತ್ರೀಜಿಯವರ ಆಶಯ, ನನ್ನ ಆಶಯವೂ ಕೂಡಾ!

ಪ್ರಸ್ತುತ ಪರಿಸ್ಥಿತಿಯನ್ನು ನೋಡಿ ನಿಮ್ಮನ್ನು ನೀವು ಕಡಿಮೆಯಾಗಿ ಅಂದಾಜು ಮಾಡಬೇಡಿ, ಪ್ರತಿಯೊಬ್ಬರೂ ಶ್ರೇಷ್ಠರೇ. ಒಂದು ಬಾರಿ ವೈಜಾಗ್ ಬಳಿ ಟ್ರೆಕ್ಕಿಂಗ್ ಇಟ್ಟರು. ಆ ಟ್ರೆಕ್ಕಿಂಗ್‌ನಲ್ಲಿ ಎಲ್ಲೆಂದರಲ್ಲೆ ಮಲಗುತ್ತಿದ್ದರು, ಒಂದು ಇರುವೆ ಕಡಿಯುತ್ತಿರಲಿಲ್ಲ, ಒಂದು ಸೊಳ್ಳೆ ಕಚ್ಚುತ್ತಿರಲಿಲ್ಲ, ಹಾವು ಕಡಿಯುತ್ತಿರಲಿಲ್ಲ. ಆಗ ಅಂದುಕೊಂಡೆ ಪತ್ರೀಜಿ ಪ್ರಕಂಪನಗಳು, ಆತನ ಆರಾಶಕ್ತಿ ಅಂತಹುದೆಂದು.

ಅಲ್ಲಿ ಮಾತುಗಳ ಸಂದರ್ಭದಲ್ಲಿ ಯಾರು ಶ್ರೇಷ್ಠರು ಎಂಬ ಪ್ರಸ್ತಾವನೆ ಬಂದಿತು. ನಾನು ಏನೆಂದುಕೊಂಡೆನೆಂದರೆ ಚೆನ್ನಾಗಿ ಹಣವುಳ್ಳವರು ಶ್ರೇಷ್ಠರು, ಅಧಿಕಾರದಲ್ಲಿರುವವರು ಶ್ರೇಷ್ಠರು, ಪದವಿಗಳು ಇದ್ದವರು, ಐಎಎಸ್, ಐಪಿಎಸ್ ಅಧಿಕಾರಿಗಳು ಶ್ರೇಷ್ಠರು ಎಂದು ಭಾವಿಸುತ್ತಿದ್ದೆನು. ಬೇಡಿಕೊಳ್ಳುವವನು ಹೀನನು, ಕನ್ನ ಹಾಕುವವನು, ಕಳ್ಳತನ ಮಾಡುವವನು, ಬಡವನು ಬಹಳ ಹೀನನು ಎಂಬ ಇದೇ ಅಭಿಪ್ರಾಯದಲ್ಲಿ ಇರುತ್ತಿದ್ದೆನು. ಅದನ್ನೇ ಪತ್ರೀಜಿಯವರೊಡನೆ ಹೇಳಿದೆನು.

ಆಣ ಅವರು ಬೈದರು, ಎಲ್ಲರೂ ಶ್ರೇಷ್ಠರೇ ಎಂದರು. ಆಶ್ಚರ್ಯಗೊಂಡೆನು, ಅದೇನು ಹಣವಿದ್ದವನು, ಪದವಿಗಳು ಇದ್ದವನು ಶ್ರೇಷ್ಠರೇ ಅಂದರೆ ಎಲ್ಲರೂ ಶ್ರೇಷ್ಠರು ಎನ್ನುತ್ತಿದ್ದಾರೆ. ಅದಕ್ಕೆ ವಿವರಣೆಯನ್ನು ಕೇಳುವ ಧೈರ್ಯ ಆಗ ನನಗೆ ಇರಲಿಲ್ಲ.

ನಂತರ ನಂತರ ನನ್ನ ಜ್ಞಾನ ಬೆಳೆದಷ್ಟು ಏಕೆ ಎಂಬುದು ಅರ್ಥವಾಯಿತು. ಇದನ್ನೆಲ್ಲಾ ಏಕೆ ಹೇಳುತ್ತಿದ್ದೇನೆಂದರೆ? ನಿಮ್ಮಲ್ಲಿ ಬಹಳಷ್ಟು ಜನರಿಗೆ ಅಲ್ಪಭಾವ ಇದೆ. ನಾನು ಕೆಲಸಕ್ಕೆ ಬಾರದವಳು, ಕೆಲಸಕ್ಕೆ ಬಾರದವನು, ಏನೂ ಮಾಡಲಾರದವನು, ಏನು ಮಾಡಲಾರದವಳು, ನಾನೆಲ್ಲಿ? ಅವರೆಲ್ಲಿ? ಇಂತಹ ಭಾವದಿಂದ ಇದ್ದಾರೆ. ಆದರೆ ಪತ್ರೀಜಿಯವರು ಎಲ್ಲರೂ ಶ್ರೇಷ್ಠರೇ ಎಂದರು. ನನಗೆ ಅನ್ನಮಾಚಾರ್ಯರು ಹಾಡಿದ ಹಾಡಿನಿಂದ ಅರ್ಥವಾಯಿತು.

"ಬ್ರಹ್ಮವೊಂದೇ, ಪರಬ್ರಹ್ಮವೊಂದೇ ಎಂದು ಹಾಡುತ್ತಾ, ಹೀನ ಅಧಿಕವು ಎಲ್ಲು ಇಲ್ಲ ಎಲ್ಲರಿಗೂ ಶ್ರೀಹರಿಯೆ ಅಂತರಾತ್ಮ" ಎಂದು ಸ್ಪಷ್ಟವಾಗಿ ಅನ್ನಮಾಚಾರ್ಯರು ಹೇಳಿದ್ದಾರೆ.

ಕಾರಣ ಎಲ್ಲರಲ್ಲೂ ಇರುವುದು ಆ ಶ್ರೀಹರಿಯೇ. ಆದ್ದರಿಂದ ಎಲ್ಲರಲ್ಲೂ ಶ್ರೀಹರಿ ಇದ್ದರೆ ಯಾರು ಹೆಚ್ಚು? ಯಾರು ಕಡಿಮೆ? ಅನಂತ ಶಕ್ತಿಯುಳ್ಳ ಆತ್ಮ ಪ್ರತಿಯೊಬ್ಬರಲ್ಲಿದೆ. ಆದ್ದರಿಂದ ಒಬ್ಬನು ಏನು ಮಾಡಬಲ್ಲನೋ! ಎರಡನೆಯವನು ಕೂಡಾ ಅದೇ ಮಾಡುತ್ತಾನೆ. ಒಬ್ಬನು ಏನನ್ನು ಸಾಧಿಸುತ್ತಾನೋ! ಎರಡನೆಯವನೂ ಅದೇ ಸಾಧಿಸುತ್ತಾನೆ. ಆದ್ದರಿಂದ ಕಡಿಮೆಯೂ ಇಲ್ಲ, ಹೆಚ್ಚೂ ಇಲ್ಲ ಎಂದು ತಿಳಿದುಕೊಳ್ಳಬೇಕು.

ಅನ್ನಮಾಚಾರ್ಯರರ ಹಾಡನ್ನು ಕೇಳಿದ ಮೇಲೆ ಪತ್ರೀಜಿಯವರು ಹೇಳಿದ್ದು ಸತ್ಯವೆಂದು ಅರ್ಥವಾಯಿತು. ಪತ್ರೀಜಿಯವರು ಸತ್ಯವನ್ನೇ ಹೇಳುತ್ತಾರೆಯಾಗಲಿ ಅಸತ್ಯವನ್ನು ಹೇಳುವುದಿಲ್ಲ, ಅಷ್ಟು ಶ್ರೇಷ್ಠರು ಪತ್ರೀಜಿಯವರು.

ಅನ್ನಮಾಚಾರ್ಯರು ಎಷ್ಟು ಸ್ಪಷ್ಟವಾಗಿ ಹೇಳಿದ್ದಾರೆ. "ಹೀನಾಧಿಕಗಳು ಎಲ್ಲೂ ಇಲ್ಲ, ಎಲ್ಲರಿಗೂ ಶ್ರೀಹರಿಯೇ ಅಂತರಾತ್ಮ" ಎಂದಿದ್ದಾರೆ. ಅಂದರೆ ಪ್ರತಿ ಒಬ್ಬರ ಅಂತರಂಗದಲ್ಲಿರುವ ಆತ್ಮವೇ ಆ ಶ್ರೀಹರಿ.

ಆದರೆ ಒಂದು ಸಂದೇಹ ಬರಬಹುದು! ಮತ್ತೆ ಏಕೆ ಸಾರ್ ಇಷ್ಟು ವ್ಯತ್ಯಾಸಗಳು ಎಂದು ಕೇಳಬಹುದು. ನಾವು ನಿಮ್ಮಂತೆ ಏಕೆ ಮಾಡಲಾರದೆ ಹೋಗುತ್ತಿದ್ದೇವೆ, ನಿಮ್ಮ ಹಾಗೆ ಮಾತನಾಡದೇ ಹೋಗುತ್ತಿದ್ದೇವೆ, ನಿಮ್ಮ ಹಾಗೆ ಏಕೆ ಹೇಳಲಾರೆವು ಎಂದು ಕೇಳಬಹುದು. ಆದರೆ ಈ ಬೇಧ ಎಂಬುದು ಗುಣಗಳಿಂದಲೇ!

ನಿನ್ನನ್ನು ನೀನು ಕೀಳಾಗಿ ಭಾವಿಸುತ್ತಿರುವೆ ಎಂದರೆ? ಅದಕ್ಕೆ ಕಾರಣ ನಿನ್ನಲ್ಲಿರುವ ಗುಣಗಳು. ಆ ಗುಣಗಳಿಂದಲೇ ಕೀಳಾಗಿ ಭಾವಿಸುತ್ತಿದ್ದಾರೆ. ಮೊದಲು ಆ ಭಾವವು

ಹೋಗಬೇಕೆಂದರೆ, ಗುಣವು ಬದಲಾಗಬೇಕು. ಗುಣ ಬದಲಾಗಬೇಕೆಂದರೆ ಮನಸ್ಸು ಶುದ್ಧಿಯಾಗಬೇಕು ಅಂದರೆ ನಿಮ್ಮ ಶಕ್ತಿ ಹೆಚ್ಚಾಗಬೇಕು, ಶಕ್ತಿ ಹೆಚ್ಚಾಗಬೇಕೆಂದರೆ,

1. ತೀವ್ರ ಸಾಧನೆ ಮಾಡಬೇಕು 2. ಆಹಾರ ನಿಯಮಗಳನ್ನು ಪಾಲಿಸಬೇಕು.

ಈ ಎರಡು ಕೆಲಸಗಳನ್ನು ಮಾಡಬೇಕು. ಮುಮ್ಮಡಿವರಂ ಬಾಲಯೋಗಿಯವರು ಅಷ್ಟು ವರ್ಷಗಳು ಹಾಗೆ ಕುಳಿತಿದ್ದಾರೆಂದರೆ ಎಷ್ಟು ಶಕ್ತಿಯನ್ನು ಸಂಪಾದಿಸಿಕೊಂಡಿದ್ದಾರೆ. ಧ್ಯಾನವು ಅಭ್ಯಾಸವಾದರೆ ಗಂಟೆಗಳು ನಿಮಿಷದಂತೆ ಕಳೆದುಬಿಡುತ್ತವೆ, ನೀವು ಕುಳಿತಿರುವಂತೆಯೆ ಅನ್ನಿಸುವುದಿಲ್ಲ.

ಆರು ತಿಂಗಳು ಹಾಗೆ ತೀವ್ರವಾಗಿ ಧ್ಯಾನ ಸಾಧನೆ ಮಾಡುತ್ತಾ ಈ ನಿಯಮಗಳನ್ನು ಪಾಲಿಸುತ್ತಾ ಇದ್ದರೆ ಮಾನವನು ಖಚಿತವಾಗಿ ಮಹಾತ್ಮನಾಗುತ್ತಾನೆ. ಇದಕ್ಕಿಂತ ಸಾಧಿಸಬೇಕಾಗಿರುವುದು ಏನಿದೆ ರೀ! ಮಾನವನು ಮಹಾತ್ಮನಾಗಬೇಕೆಂದರೆ 300 ಜನ್ಮಗಳು ಬೇಕಾಗುತ್ತದೆ. ಅದನ್ನು ನೀವು ಧ್ಯಾನದ ಮೂಲಕ ಆರು ತಿಂಗಳಲ್ಲಿ ಸಾಧಿಸುತ್ತೀರಿ.

ಇನ್ನೂ ಶಕ್ತಿ ಬೆಳೆದಷ್ಟು ಬುದ್ಧಿ ವಿಕಸಿಸುತ್ತದೆ, ವಿವೇಕ ಉಂಟಾಗುತ್ತದೆ, ವಿಚಕ್ಷಣಾ ಜ್ಞಾನ ಉಂಟಾಗುತ್ತದೆ, ಜ್ಞಾನ ವೃದ್ಧಿಯಾಗುತ್ತದೆ. ಜ್ಞಾನವು ಅಗ್ನಿಯಂತೆ ಪ್ರಜ್ವಲಿಸಿದಾಗ ಕರ್ಮಗಳು ಕೂಡಾ ರಹಿತವಾಗುತ್ತವೆ. ಯಾವಾಗಾದರೆ ಕರ್ಮಗಳು ರಹಿತವಾಗುತ್ತವೆಯೋ, ನಿಮಗಿರುವ ಅವಶ್ಯಕತೆಗಳಿಗನುಸಾರವಾಗಿ ಪ್ರಕೃತಿ ನಿಮಗೆ ಅತೀಂದ್ರಿಯ ಶಕ್ತಿಗಳನ್ನು ಕಲ್ಪಿಸುತ್ತದೆ. ಎದುರಿಗೆ ಇರುವವರ ಮನಸ್ಸಿನಲ್ಲಿ ಅಂದುಕೊಂಡದ್ದು ತಿಳಿಯುತ್ತದೆ. ದಿವ್ಯ ನೇತ್ರ ಕ್ರಿಯಾಶೀಲವಾಗುತ್ತದೆ, ಸೂಕ್ಷ್ಮ ಶರೀರಯಾನವನ್ನು ಮಾಡುತ್ತಾರೆ, ಅವಶ್ಯವಾದರೆ ಹಿಂದಿನ ಜನ್ಮಗಳನ್ನೂ ನೋಡಿಕೊಳ್ಳುತ್ತೀರಿ.

ಈ ಶಕ್ತಿಗಳನ್ನು ಉಪಯೋಗಿಸಿಕೊಂಡು ನಿಮ್ಮ ಜ್ಞಾನವನ್ನು ಇನ್ನೂ ಹೆಚ್ಚಿಸಿಕೊಳ್ಳುತ್ತೀರಿ. ಜ್ಞಾನವನ್ನು ಹೆಚ್ಚಿಸಿಕೊಳ್ಳುವುದಲ್ಲ, ಸತ್ಯವನ್ನು ಅನುಭವದೊಳಕ್ಕೆ ತಂದುಕೊಳ್ಳುತ್ತೀರಿ. ಅದೇ ಪರಾಕಾಷ್ಠೆ ಎಂದು ಪತ್ರೀಜಿ ಹೇಳಿದ್ದಾರೆ. ಅಂತಹವರಿಗೆ ಸತ್ಯ ಲೋಕವನ್ನು ಸೇರುವ ಅರ್ಹತೆ ಬರುತ್ತದೆ.

# ಗುಣವನ್ನಾಧರಿಸಿಯೇ ಕರ್ಮಗಳು

**"ಮಾನವನ ಗುಣವನ್ನಾಧರಿಸಿಯೆ ಅವರು ಮಾಡುವ ಕರ್ಮಗಳು ಆಧಾರವಾಗಿರುತ್ತವೆ, ಅವರ ಮಾತುಗಳು ಆಧಾರವಾಗಿರುತ್ತವೆ, ಅವರು ಮಾಡುವ ಸೇವೆಗಳು ಆಧಾರವಾಗಿರುತ್ತವೆ."**

ಈ ದಿನ ನಾವು ಯಾವ ಗುಣದಲ್ಲಿರುವವರು ಮಾಡುವ ದಾನ ಧರ್ಮಗಳು ಯಾವ ವಿಧವಾಗಿ ಇರುತ್ತವೆ ಎಂದು ತಿಳಿದುಕೊಳ್ಳೋಣ.

## ತಮೋಗುಣ

ಈ ತಮೋಗುಣದಲ್ಲಿದ್ದವರು ಎಂತಹ ದಾನಧರ್ಮಗಳನ್ನು ಮಾಡುವುದಿಲ್ಲ. ಅವರಿಗಿರುವ ಧನವನ್ನು ಮೊದಲು ಮದ್ಯಪಾನ ಮಾಡಲು, ಇತರರಿಗೆ ಕುಡಿಸಲು ಉಪಯೋಗಿಸುತ್ತಾರೆ.

ಆ ಮದ್ಯದ ಅಂಗಡಿಗಳಲ್ಲಿ, ಆ ಬೀರ್ ಅಂಗಡಿಗಳಲ್ಲಿ ಕುಡಿಯುವುದಕ್ಕೆ ಬಳಸುತ್ತಾರೆ. ಅವರ ಬಳಿ ಇದ್ದ ಉಳಿದ ಹಣವನ್ನು ಎಚ್ಚರವಿಲ್ಲದೆ ಬಿದ್ದಿರುವಾಗ ಯಾರೋ ಒಬ್ಬರು ದೋಚಿಕೊಳ್ಳುತ್ತಾರೆ. ಆ ವಿಷಯವು ಕೂಡಾ ಅವರಿಗೆ ತಿಳಿಯದು, ಸ್ವಲ್ಪ ಹೊತ್ತಿಗೆ ಆ ಮತ್ತು ಇಳಿದು ಹೋಗುತ್ತದೆ, ಆಗ ಜೇಬುಗಳು ತಡವಿಕೊಳ್ಳುತ್ತಾರೆ, ಏನಿರುತ್ತದೆ, ಜೇಬು ಖಾಲಿಯಾಗಿರುತ್ತದೆ.

ಆಣ ಹಣ ಹೋಯಿತೆಂದು ಅಳುತ್ತಾ ಕೂಡುತ್ತಾರೆ. ಇನ್ನು ಏನು ಮಾಡಬೇಕೋ ತಿಳಿಯದೆ ಅವರನ್ನು ಇವರನ್ನು ಬೈಯುತ್ತಾ ಇರುತ್ತಾರೆ. ಆ ಕೋಪದಲ್ಲಿ ಆವೇಶದಲ್ಲಿ ತೂರಾಡುತ್ತಾ ಹೋಗುತ್ತಾ ಯಾವುದೋ ಗೋಡೆಗೆ ಗುದ್ದಿಕೊಳ್ಳುತ್ತಾರೆ, ಇಲ್ಲದಿದ್ದರೆ ಯಾವುದಾದರೂ ಮರಕ್ಕೆ ಢಿಕ್ಕಿ ಹೊಡೆಯುತ್ತಾರೆ. ಅದರಿಂದ ಮತ್ತೆ ಏಟುಗಳು ತಗಲುತ್ತವೆ, ಮತ್ತೆ ಬಾಧೆಪಡುತ್ತಾರೆ, ಇದು ತಮೋಗುಣದಲ್ಲಿ ಇರುವವರ ಪರಿಸ್ಥಿತಿ.

ಆ ಮತ್ತಿನಲ್ಲಿ ಅವರನ್ನು ಇವರನ್ನು ಹೊಡೆಯುತ್ತಾರೆ, ಅವರು ಸುಮ್ಮನಿರುತ್ತಾರಾ? ಕೇಸು ಇಡುತ್ತಾರೆ. ಮತ್ತೆ ಹೊಸದೊಂದು ಕೇಸು ಬಂದು ಮೇಲೆ ಬೀಳುತ್ತದೆ. ಅದಕ್ಕಾಗಿ ಆ ವಕೀಲರ ಫೀ, ಆ ಇಲಾಖೆಗೆ ಲಂಚಗಳು, ಹೀಗೆ ಇರುತ್ತದೆ ಇವನ ಬದುಕು. ಅಂತಹವರ ಬದುಕು ಇಹದಲ್ಲಿ ಬಹಳ ಹೀನಾಯವಾಗಿ ಆಗುತ್ತದೆ.

ಇಂತಹ ಕೆಲಸಗಳನ್ನು ಮಾಡಿದವರು ಮರಣದ ನಂತರ ನರಕಕ್ಕೆ ಹೋಗುತ್ತಾರೆ.

ಹೋಗುವುದೇ ಅಲ್ಲ, ಮತ್ತೆ ಜನ್ಮವನ್ನು ತೆಗೆದುಕೊಂಡರೂ ನೀಚವಾದ ಜನ್ಮ ಲಭಿಸುತ್ತದೆ. ಇಂತಹವರ ದುಸ್ಥಿತಿ ಭಗವಂತನಿಗೇ ತಿಳಿಯಬೇಕು. ಹೀಗೆ ಇರುತ್ತದೆ ಇವರ ಬದುಕು.

ಅವರಿಗೆ ಬಹಳ ಜನ್ಮಗಳು ಹೀಗೆಯೇ ಕಳೆದುಬಿಡುತ್ತದೆ. ಅವರು ಪಕ್ಕದವರನ್ನು ನೋಡುತ್ತಾರೆ. ಹೋಲಿಕೆ ಮಾಡಿಕೊಳ್ಳುತ್ತಾರೆ. ಇದು ಅಲ್ಲ ಜೀವನವೆಂದು ಸ್ವಲ್ಪ ಬದಲಾವಣೆ ತಂದುಕೊಳ್ಳುತ್ತಾರೆ. ಇಂತಹವರಿಗೆ ತಕ್ಷಣವೇ ಬದಲಾವಣೆ ಆಣದು. ವಿಧಾನವಾಗಿ ಗುಣವು ಬದಲಾಗುತ್ತದೆ. ಗುಣ ಬದಲಾಗಬೇಕೆಂದರೆ 100, 150 ಜನ್ಮಗಳು ಹಿಡಿಯುತ್ತದೆ ಎಂದು ಪತ್ರೀಜಿಯವರು ಹೇಳಿದ್ದಾರೆ. ಹಾಗೆ ಸತ್ತು, ಕೆಟ್ಟು, ತಮೋಗುಣಗಳಿಂದ ರಜೋಗುಣಕ್ಕೆ ಬರುತ್ತಾರೆ.

## ರಜೋಗುಣ

ಈ ರಜೋಗುಣದಲ್ಲಿ ಬಂದವರು ದೊಡ್ಡಸ್ತಿಕೆಗಾಗಿ ಖರ್ಚು ಮಾಡುತ್ತಾರೆ, ಅವರ ದರ್ಪವನ್ನು ತೋರಿಸುವುದಕ್ಕೆ ಖರ್ಚು ಮಾಡುತ್ತಾರೆ. ಆಡಂಬರವಾಗಿ ಕಾಣಿಸುವುದಕ್ಕೆ ಖರ್ಚು ಮಾಡುತ್ತಾರೆ, ಹೆಸರು, ಕೀರ್ತಿ ಪ್ರತಿಷ್ಠೆಗಳಿಗಾಗಿ ಖರ್ಚು ಮಾಡುತ್ತಾರೆ.

ಇವರು ಮಾಡುವ ಖರ್ಚು ಹೇಗೆ ಇರುತ್ತದೆ ಎಂದರೆ ಎಂ.ಎಲ್.ಎ ಆಗಲಿ ಎಂ.ಪಿ ಯಾಗಲಿ, ಮುಖ್ಯಮಂತ್ರಿಯಾಗಲಿ, ಇವರ ಊರಿಗೆ ಬರುತ್ತಿದ್ದಾರೆಂದು ತಿಳಿದರೆ ಇವನ ಮನೆಗೇ ಬಂದಂತೆ, ಇವರ ಓಣಿಗೆ ಬಂದಂತೆ ಹಡಾಉಡಿ ಮಾಡುತ್ತಾರೆ. ಊರಿನಲ್ಲಿಯ ಮದುವೆಗೆ ನಾಯಿಗಳ ಹಡಾಉಡಿ ಅನ್ನುತ್ತಾರಲ್ಲ ನೋಡಿ, ಹಾಗೆ ಇರುತ್ತದೆ ಇವರ ಹಡಾಉಡಿ.

ಆತನು ಯಾರ ಮನೆಗೋ ಬರುತ್ತಾನೆ. ಆ ವಿಷಯವನ್ನು ಎಲ್ಲರಿಗೂ ಹೇಳಬೇಕೆಂದು ಕರಪತ್ರಗಳನ್ನು ಹಾಕಿಸುತ್ತಾನೆ, ಇವನೇ ಬ್ಯಾನರಗಳನ್ನು ಕಟ್ಟಿಸುವುದು ಇಂತಹ ಗಡಿಬಿಡಿಯನ್ನು ಮಾಡುತ್ತಾರೆ. ಇದೆಲ್ಲಾ ರಜೋಗುಣ ಲಕ್ಷಣವು.

ಅಷ್ಟೇ ಅಲ್ಲ ಅವರಿಗೆ ಇನ್ನು ಏನಾದರೂ ಬೇಕೆಂದರೆ ಮದ್ಯ, ಔತಣವನ್ನು ಕೂಡಾ ಏರ್ಪಾಡು ಮಾಡುತ್ತಾರೆ. ಹೀಗೆ ಖರ್ಚು ಮಾಡುತ್ತಾರೆ. ಕೊನೆಗೆ ಇವರು ಮಾಡುವ ಕೆಲಸಕ್ಕೆ ಪುಣ್ಯವು ಇರದು, ಪುರುಷಾರ್ಥವು ಇರದು.

ಹಾಗೆ ಇರುತ್ತವೆ ಇವರು ಮಾಡುವ ಖರ್ಚುಗಳು. ಹೀಗೆ ಇನ್ನು 100, 150 ಜನ್ಮಗಳು ಕಳೆದುಬಿಡುತ್ತವೆ. ಈ ವಿಧಾನವಾಗಿ ಗುಣವು ಬದಲಾಗುತ್ತದೆ. ಸಾತ್ವಿಕ ಗುಣದಲ್ಲಿ ಬರುತ್ತಾರೆ.

# ಸಾತ್ವಿಕ ಗುಣ

ಸಾತ್ವಿಕ ಗುಣವುಳ್ಳವರಿಗೆ ದೈವದ ಮೇಲೆ ಆಸಕ್ತಿ ಇರುತ್ತದೆ. ತಾಳ್ಮೆ, ಸಹನೆ ಕೂಡಾ ಇರುತ್ತದೆ, ಸ್ವಲ್ಪ ದಾನ ಧರ್ಮಗಳನ್ನು ಮಾಡುತ್ತಾರೆ, ಅನ್ನದಾನ, ವಸ್ತ್ರದಾನ, ಹೀಗೆ ನಾನಾ ರೀತಿಯ ದಾನಗಳು, ಶ್ರಮದಾನ ಮಾಡುತ್ತಾರೆ. ಯಾವ ದಾನ ಮಾಡಿದರೂ, ಯಾವ ಕೆಲಸ ಮಾಡಿದರೂ ಅದು ಹತ್ತು ಮಂದಿಗೆ ಉಪಯೋಗವಾಗುವಂತೆ ನೋಡಿಕೊಳ್ಳುತ್ತಾರೆ.

ಯಾವ ರಂಗದಲ್ಲಿ ಇದ್ದರೂ ಹೀಗೆ ದಾನಗಳನ್ನು ಮಾಡುವುದು, ಸಹಾಯ ಮಾಡುವುದು, ಆರ್ಥಿಕವಾಗಿ ಸಹಕರಿಸುವುದು, ಸಹಾಯ ಸಹಕಾರಗಳನ್ನು ಕೊಡುವುದನ್ನು ಮಾಡುತ್ತಾರೆ.

ಕಡ್ತಾಲ್‌ನಲ್ಲಿ ನೋಡಿ, ಎಷ್ಟು ಜನರು ಎಷ್ಟು ರೀತಿಯಾಗಿ ಕೊಡುತ್ತಾರೆ.

ಇದು ಕೂಡಾ ಸಾತ್ವಿಕ ಗುಣ ಲಕ್ಷಣವೆ. ಹಾಗೆ ಹಣವನ್ನು ಕೊಡುವವರು ಇದ್ದಾರೆ, ಶ್ರಮದಾನ ಮಾಡುವವರು ಇದ್ದಾರೆ. ವಾಕ್ಕನ್ನು ಕೊಡುವವರಿದ್ದಾರೆ, ಹೀಗೆ ಇಷ್ಟು ರೀತಿಯಾಗಿ ಸೇವೆ ಮಾಡಿದರೆ ಸಾತ್ವಿಕ ಗುಣದೊಳಗೆ ಬಂದಂತೆಯೇ.

ನೀವೆಲ್ಲಾ ಕೂಡಾ ಏನೋ ಒಂದು ಮಾಡುತ್ತಿದ್ದಿರಿ. ಮಾಡದಂತೆ ಮಾತ್ರ ಯಾರೂ ಇಲ್ಲ, ಅವರ ಸ್ಥಾಯಿಯಲ್ಲಿ (ಮಟ್ಟದಲ್ಲಿ) ಅವರು ಮಾಡುತ್ತಿದ್ದಾರೆ. ಹಾಗೆ ಕೊಡುವುದು ಎನ್ನುವುದು ಸಾತ್ವಿಕ ಗುಣ ಲಕ್ಷಣ.

ಹಾಗೆ ಸಾತ್ವಿಕ ಗುಣ ಬೆಳೆದಂತೆಲ್ಲ ಇವರು ಕೊಡುವುದು ಇನ್ನೂ ಬೆಳೆಯುತ್ತದೆ. ಒಂದು ವೇಳೆ ನಿಮಗೆ ಕೊಡಬೇಕೆಂದು ಅನ್ನಿಸದಿದ್ದರೆ ನೀವು ಇನ್ನೂ ಸಾತ್ವಿಕ ಗುಣದೊಳಗೆ ಬಂದಿಲ್ಲವೆಂದು ಲೆಕ್ಕ. ಕೊಡಲಾರದೆ ಅಲ್ಲ, ಕೊಡಬೇಕೆಂದು ಇಲ್ಲದಿರುವುದು! ಬಹಳ ಜನರಿಗೆ ದೇಣಿಗೆಗಳಿಗಾಗಿ ಚೆನ್ನಾಗಿ ಹಣವಿರುವವರ ಬಳಿಗೆ ಹೋಗುತ್ತಾರೆ. ಆದರೆ ಹಣವಿದ್ದ ಮಾತ್ರಕ್ಕೆ ಕೊಡಲಾರರು.

ಅದಕ್ಕೆ "ಹಣವಿದ್ದವನು ಕೊಡಲಾರ, ಮನಸ್ಸಿದ್ದವನು ಕೊಡುತ್ತಾನೆ" ಎನ್ನುತ್ತಾರೆ. ಸಾತ್ವಿಕ ಗುಣವುಳ್ಳವನಿಗೆ ಜೀವಿಗಳ ಬಗ್ಗೆ, ಪ್ರಾಣಿಗಳ ಬಗ್ಗೆ, ದಯಾ ಗುಣವಿರುತ್ತದೆ. ಅಂತಹ ಲಕ್ಷಣಗಳುಳ್ಳವರು ಶಾಖಾಹಾರ ರ್‍ಯಾಲಿಗಳನ್ನು ಮಾಡುವುದು, ಪಿರಮಿಡ್‌ಗಳನ್ನು ಕಟ್ಟಿಸುವುದು ಇಂತಹವುಗಳನ್ನು ಮಾಡುತ್ತಾ ಇರುತ್ತಾರೆ. ಸಾತ್ವಿಕ ಗುಣ ಸ್ಥಿತಿಯನ್ನಾಧರಿಸಿ ಮಾಡುವವೆಲ್ಲವು ಆಧಾರಪಟ್ಟಿರುತ್ತವೆ.

ಇಲ್ಲಿ ಹತ್ತು ಮಂದಿಗೆ ಉಪಕಾರ ಮಾಡುವವರು ಸಜ್ಜನರು, ಹತ್ತು ಮಂದಿಗೆ ಅಪಕಾರವನ್ನು ಮಾಡುವವರು ದುರ್ಜನರು.

ನೋಡಿರಿ, ನೀರನ್ನು ಎಂತಹ ಪವಿತ್ರ ಸ್ಥಳದಲ್ಲಿ ಇಟ್ಟರೂ ಆ ನೀರು ತಗ್ಗಿನ ಕಡೆಗೆ ಹೋಗುತ್ತದೆ. ಹಾಗೆಯೇ ಎಂತಹ ಅಪವಿತ್ರ ಪ್ರದೇಶದಲ್ಲಿಟ್ಟರೂ ಬೆಂಕಿಯು ಮೇಲಕ್ಕೆ ಹೋಗುತ್ತದೆ. ಹಾಗೆಯೇ ಸಜ್ಜನರು ಬದುಕಿರುವಾಗಲೇ ಅಲ್ಲ, ಯಾವ ಸಮಯದಲ್ಲಿಯಾದರೂ, ಯಾವ ಸಂದರ್ಭದಲ್ಲಾದರೂ ಆಗಲಿ ಸರಿ, ಒಳ್ಳೆಯದನ್ನೇ ಮಾಡುತ್ತಾ ಇರುತ್ತಾರೆ. ಕೊನೆಗೆ ಒಳ್ಳೆಯದನ್ನು ಮಾಡಿಯೇ ಮರಣಿಸುತ್ತಾರೆ.

ಪತ್ರೀಜಿಯವರನ್ನು ಗಮನಿಸಿದರೆ ನಮಗೆ ತಿಳಿಯುತ್ತದೆ. ಎಲ್ಲರಿಗೂ ಯಾವುದೋ ರೀತಿಯಲ್ಲಿ ಲಾಭ, ಒಳಿತನ್ನು ಉಂಟು ಮಾಡಬೇಕೆಂದೇ ನೋಡಿದರು. ನಾವು ಗಮನಿಸಿದೆವು ಪತ್ರೀಜಿಯವರು ಪ್ರಾಣ ಹೋಗುವ ತನಕ ಯಾವುದೋ ರೀತಿಯಲ್ಲಿ ಸೇವೆ ಮಾಡುತ್ತಲೇ ಇದ್ದರು. ಹೋಗುವುದಕ್ಕೆ ತಾಳ್ಮೆ ಇಲ್ಲದಿದ್ದರೂ ಅವರು ಲಡಾಕ್‌ಗೆ ಹೋದರು.

ಹಾಗೆಯೇ ರಾಮಾಯಣದಲ್ಲಿ ಜಟಾಯುವು ಬದುಕಿರುವಷ್ಟು ಹೊತ್ತು ದಶರಥ ಮಹಾರಾಜನಿಗೆ ಎಷ್ಟೋ ಸಹಕಾರವನ್ನು ಕೊಟ್ಟಿತು. ಸಾಯುವಾಗ ಕೂಡಾ ರಾಮ ಲಕ್ಷ್ಮಣರಿಗೆ, ಸೀತೆಯನ್ನು ಆ ಕಡೆಗೆ ತೆಗೆದುಕೊಂಡು ಹೋದನು ಎಂದು ಹೇಳಿ ಮರಣಿಸಿತು. ಹಾಗೆ ಸಾತ್ವಿಕ ಗುಣದಲ್ಲಿ ಇರುವವರು ಪ್ರಾಣವು ಹೋಗುತ್ತಿರುವಾಗ ಕೂಡಾ ಯಾವುದೋ ಉಪಕಾರವನ್ನು ಮಾಡುತ್ತಾರೆ. ಒಂದು ವೇಳೆ ಏನೂ ಮಾಡಲಾಗದಿದ್ದರೂ ಅಂತಹ ಕಾರ್ಯಕ್ರಮಗಳು ನಡೆಯುತ್ತಾ ಇದ್ದರೆ ಅವುಗಳನ್ನು ಕೇಳಿ ಬಹಳ ಸಂತೋಷಿಸುತ್ತಾರೆ.

**ದುರ್ಜನರು :** ದುಷ್ಟ ಕಾರ್ಯಗಳನ್ನು ಮಾಡುವವನು ಬದುಕಿರುವಷ್ಟು ಕಾಲ ಕೇಡನ್ನೇ ಮಾಡುತ್ತಾನೆ. ಸಾಯುತ್ತಿರುವಾಗಲೂ ಕೂಡಾ ಕೇಡನ್ನು ಮಾಡುತ್ತಲೇ ಸಾಯುತ್ತಾನೆ. ವಿಶ್ವಾಮಿತ್ರನು ಲೋಕಕಲ್ಯಾಣಕ್ಕಾಗಿ ಯಜ್ಞವನ್ನು ಏರ್ಪಡಿಸಿದನು. ಅಷ್ಟು ಒಳ್ಳೆಯ ಕಾರ್ಯ ಮಾಡುತ್ತಿದ್ದರೆ ರಾಕ್ಷಸರಾದ ಮಾರಿಚ, ಶೂಭಾಹುಗಳು ಅದನ್ನು ಹಾಳು ಮಾಡುವುದಕ್ಕೆ ನೋಡಿದರು.

ಮಾರಿಚನು ಎನ್ನುವವನು ಪ್ರಾಣ ಹೋಗುತ್ತಿರುವಾಗ ಕೂಡಾ ಅಪಕಾರವನ್ನು ಮಾಡಿದನು. ಬಂಗಾರದ ಜಿಂಕೆಯ ವೇಷ ಧರಿಸಿ ಹೋದರೆ ರಾಮನು ಬಾಣವನ್ನು ಬಿಟ್ಟರೆ ಕೆಳಗೆ ಬಿಳುತ್ತಾ ಹಾ ಲಕ್ಷ್ಮಣ! ಹಾ ಸೀತಾ! ಎಂದು ಕಿರುಚುತ್ತಾ ಸತ್ತನು.

ರಾಮನಿಗೆ ಏನಾಗಿ ಹೋಯಿತೋ ಎಂದು ಸೀತಾದೇವಿ ತನಗೆ ಕಾವಲಿದ್ದ ಲಕ್ಷ್ಮಣನನ್ನು ಕಳುಹಿಸಿದಳು. ತೀರಾ ಹೋಗಿ ಅಲ್ಲಿ ಮರಣಿಸಿದ್ದು ರಾಮನಲ್ಲ, ಇವನು. ಈ ಸಮಯದೊಳಗೆ ರಾವಣಾಸುರನು ಬಂದು ಸೀತಾದೇವಿಯನ್ನು ತೆಗೆದುಕೊಂಡು ಹೋದನು. ಈ ರೀತಿ ಇರುತ್ತವೆ ದುಷ್ಟ ಲಕ್ಷಣಗಳುಳ್ಳವರ  ಕೆಲಸಗಳು. ಬದುಕಿರುವಾಗ ಯಾರಿಗೂ ಒಳ್ಳೆಯದು ಮಾಡರು, ಸಾಯುವಾಗ ಕೂಡಾ ಯಾರಿಗೂ ಒಳ್ಳೆಯದು

ಮಾಡರು.

ಈ ದುಷ್ಟ ಲಕ್ಷಣಗಳು ಇರುವವರಿಗೆ ಯಾರಾದರೂ ಒಳ್ಳೆಯ ಕೆಲಸಗಳು ಮಾಡುತ್ತಿದ್ದರೆ ಬಾಧೆ ಉಂಟಾಗುತ್ತದೆ, ಸಂತೋಷಿಸುವುದಿಲ್ಲ, ಹೊರತು ಬಾಧೆಪಡುತ್ತಾರೆ. ಇನ್ನು ದುಷ್ಟ ಲಕ್ಷಣಗಳು ಇರುವ ಕೆಲವು ಜನ ಒಳ್ಳೆಯದನ್ನು ಮಾಡುವಾಗ ಹಾಳು ಮಾಡುವ ಪ್ರಯತ್ನ ಮಾಡುತ್ತಾರೆ.

ಈ ರೀತಿಯಾಗಿ ಗುಣಗಳನ್ನು ಬದಲಾಯಿಸಿಕೊಳ್ಳುವುದಕ್ಕೆ ನಮ್ಮ ಸಾಧಕರು ರಾತ್ರಿಯೆಲ್ಲಾ ಸಾಧನೆ ಮಾಡಿದರು ಎಂದರೆ ನನಗೆ ತುಂಬಾ ಸಂತೋಷ ಆಯಿತು. ನೀವು ಮನಸ್ಸನ್ನು ಶುದ್ಧಿ ಮಾಡಿಕೊಳ್ಳಿ, ಆ ಶುದ್ಧ ಬುದ್ಧಿಯೆ ನಿಮ್ಮನ್ನು ನಡೆಸುತ್ತದೆ.

ಮನಸ್ಸು ಎಷ್ಟು ಶುದ್ಧಿ ಆದರೆ ಬುದ್ಧಿ ಅಷ್ಟು ಚೆನ್ನಾಗಿ ವಿಕಸಿಸುತ್ತದೆ, ಬುದ್ಧಿ ಎಷ್ಟು ಚೆನ್ನಾಗಿದ್ದರೆ ಅವರ ಕೆಲಸಗಳು ಅಷ್ಟು ಪವಿತ್ರವಾಗಿ, ಶುದ್ಧವಾಗಿರುತ್ತವೆ. ಅದಕ್ಕಿಂತ ಏನೂ ಇಲ್ಲಾರಿ. ಒಳ್ಳೆಯದಾಗಿ ಬದಲಾಗುವುದಕ್ಕೆ, ಕೆಟ್ಟವನಾಗಿ ಇರುವುದಕ್ಕೆ ಮನಸ್ಸೇ ಕಾರಣ, ಗುಣವೇ ಪ್ರಧಾನ. ಅದನ್ನು ಬದಲಾಯಿಸುವ ಮಾರ್ಗವೇ ಪತ್ರೀಜಿಯವರು ಹೇಳಿದ, ಬುದ್ಧನು ಹೇಳಿದ 'ಶ್ವಾಸದ ಮೇಲೆ ಗಮನ' ಧ್ಯಾನ.

**1. "ಮಹಾತ್ಮರು ಹೇಳಿದ ಇನ್ನೊಂದು ವಿಷಯ ತಿಳಿದುಕೊಳ್ಳೋಣ "ಯಾವ ಮಾನವನೇ ಆಗಲಿ ಸರಿ ತಮ್ಮ ಕೈಗಳಿಂದ ಧರ್ಮವಾಗಿ ಸಂಪಾದಿಸಿ, ತಾವು ತಿಂದು ಅದರಲ್ಲಿಂದ ಸ್ವಲ್ಪ ಇತರರಿಗೆ ಹಂಚಬೇಕು, ಅಂತಹವರೆ ಭಗವಂತನನ್ನು ಹೊಂದಬಲ್ಲರು."**

ಭಗವಂತನನ್ನು ಹೊಂದುವುದು ಅಂದರೆ ಭಗವಂತನನ್ನು ಹೊಂದುವ ಮಾರ್ಗವನ್ನು ತಿಳಿದುಕೊಳ್ಳುವುದು. ಎಲ್ಲಾ ತಿಳಿದು ಆಚರಿಸಿದರೆ ಕೊನೆಗೆ ಆ ಭಗವಂತನನ್ನೇ ಹೊಂದಬಲ್ಲರು. ಸಮಸ್ತ ದುಃಖಗಳಿಂದ ಹೊರಬರುತ್ತಾರೆ. ಕೊನೆಗೆ ಮೋಕ್ಷವನ್ನು ಕೂಡ ಹೊಂದಬಲ್ಲರು. ಅಂದರೆ ಜನ್ಮರಾಹಿತ್ಯ ಸ್ಥಿತಿಯನ್ನು ಹೊಂದುತ್ತಾರೆ, ಅಂದರೆ ಭೂಮಿಯ ಮೇಲೆ ಇನ್ನು ಬರುವುದಿಲ್ಲ. ಭೂಮಿಯ ಮೇಲೆ ಬರದಿದ್ದರೆ ಇನ್ನೂ ದುಃಖ ಎಲ್ಲಿರುತ್ತದೆ? ಅಂದರೆ ಶಾಶ್ವತವಾಗಿ ದುಃಖದಿಂದ ಹೊರಬರುತ್ತಾರೆ. ಯಾವ ಮಾನವರಾಗಲಿ ಕೋರಿಕೊಳ್ಳಬೇಕಾದದ್ದು, ಪ್ರಯತ್ನಿಸಬೇಕಾಗಿರುವುದು ಇದೆ.

ಭಗವಂತನ ಮಾರ್ಗವನ್ನು ಹೊಂದಬೇಕೆಂದರೆ ತಾನು ಕಷ್ಟಪಟ್ಟು ಸಂಪಾದಿಸಿ ತಾನು ಉಂಡು ಇತರರಿಗೆ ಹಂಚಬೇಕು. ಇದೇ ಮಹಾತ್ಮರು ನೀಡಿದ ಸಂದೇಶ. ಈ ಮಾರ್ಗದಲ್ಲಿ ಪಯಣಿಸುವಾಗ ಏನಾದರು ಸಾಧಿಸಬೇಕೆಂದರೆ ಯಾರಿಗಾಗಲಿ ಶರೀರ

ಅವಶ್ಯಕ. ಹಾಗೆಯೇ ಶರೀರಕ್ಕೆ ಕೆಲವು ಅವಶ್ಯಕತೆಗಳು ಇವೆ. ಅವು ಕೂಳು (ಊಟ) ಅಂದರೆ ತಿಂಡಿ, ಗೂಡು ಅಂದರೆ ಮನೆ, ವಸ್ತ್ರ ಅಂದರೆ ಬಟ್ಟೆ. ಸಂಗಾತಿ ಅಂದರೆ ಗಂಡನಿಗೆ ಹೆಂಡತಿ, ಹೆಂಡತಿಗೆ ಗಂಡನು.

ಅವಶ್ಯಕತೆಗಳು ತೀರಬೇಕೆಂದರೆ ಯಾರಾಗಲಿ ಧನವನ್ನು ಸಂಪಾದಿಸಬೇಕು. ಧನವನ್ನು ಸಂಪಾದಿಸಿದೆ ಶಾರೀರಿಕ ಅವಶ್ಯಕತೆಗಳು ತೀರವು. ಹಣದ ಅವಶ್ಯಕತೆಗಳಿಗೆ ಸರಿ ಹೊಂದುವಷ್ಟು ಇರಬೇಕು. ನೆನಪಿಟ್ಟುಕೊಳ್ಳಬೇಕಾದ ವಿಷಯ, ಅವಶ್ಯಕತೆಗಳು ಬೇರೆ, ಕೋರಿಕೆಗಳು ಬೇರೆ. ಕೋರಿಕೆಗಳಿಗೆ ದಾಸರಾದರೆ ಕೋಟಿಗಳು ಸಂಪಾದಿಸಿದರೂ ಸರಿ ಹೋಗದು. ನೋಡಿರಿ ದೊಡ್ಡಸ್ತಿಕೆಗಾಗಿ ಮಾಡುವ ಸಮಾರಂಭಗಳಲ್ಲಿ ಆಹಾರವನ್ನು ಎಷ್ಟು ವ್ಯರ್ಥ ಮಾಡುತ್ತಾರೆ.

ಪತ್ರೀಜಿಯವರು "ಮಾನವರಿಗೆ ಒಂದು ರೊಟ್ಟಿ ತುಂಡು, ನಿಂಬೆಹಣ್ಣಿನ ಉಪ್ಪಿನಕಾಯಿ ಒಂದು ತುಂಡು ಸರಿಹೋಗದೆ? ಎನ್ನುತ್ತಾರೆ."

ಆದ್ದರಿಂದ ಮಹಾತ್ಮರು ಅವಶ್ಯಕತೆಗಳಿಗೆ ಸರಿ ಹೋಗುವಷ್ಟು ಮಾತ್ರ ಸಂಪಾದಿಸಿರಿ ಎನ್ನುತ್ತಾರೆ. ಸಂಪಾದನೆಗಾಗಿ ನಾವು ತಪ್ಪುಗಳನ್ನು ಮಾಡಬೇಕಾಗಿಲ್ಲ. ಅಧರ್ಮದಿಂದ ಸಂಪಾದಿಸಿ ಬೇಕಾದ ಕೆಲಸವಿಲ್ಲ. ಪಾಪಗಳನ್ನು ಮಾಡುತ್ತಾ ಸೃಷ್ಟಿ ವಿರುದ್ಧವಾಗಿ ಜೀವಿಸಬೇಕಾಗಿಲ್ಲ. ಆದ್ದರಿಂದ ತಿಳಿದುಕೊಳ್ಳಿ ಕೋರಿಕೆಗಳನ್ನು ತೀರಿಸಿಕೊಳ್ಳುವುದಕ್ಕಾಗಿ ಸಂಪಾದಿಸಬೇಕೆಂದರೆ ಪಾಪಗಳನ್ನು ಮಾಡಬೇಕಾದದ್ದೇ. ಅದರ ಫಲವಾಗಿ ಕೋಟಿಗಳು ಇರುತ್ತವೆ ಆದರೆ, ಕಷ್ಟಗಳಿಂದ, ಲೆಕ್ಕವಿಲ್ಲದಷ್ಟು ರೋಗಗಳಿಂದ ಬಾಧೆಪಡುತ್ತಾರೆ. ಯಾವಾಗ ಸಾಯುತ್ತಾರೋ ತಿಳಿಯದು, ಅಸಲು ಅದು ಜೀವನವೇ ಅಲ್ಲ.

ಆದ್ದರಿಂದ ತಾನು ಸಂಪಾದಿಸಿಕೊಂಡದ್ದರಲ್ಲಿ ತಾನುಂಡು, ಸ್ವಲ್ಪ ಇತರರಿಗೆ ಹಂಚಿಡಬೇಕು, ಆಗ ಅವರಿಗೆ ಶರೀರವು ಸಹಕರಿಸುತ್ತದೆ. ಸಮಸ್ಯೆಗಳಿರುವುದಿಲ್ಲ. ಕಷ್ಟಗಳಿರುವುದಿಲ್ಲ, ರೋಗಗಳು ಇರುವುದಿಲ್ಲ. ಅಂತಹ ಶರೀರದಿಂದ ಭಗವಂತನನ್ನು ಹೊಂದುವ ಪ್ರಯತ್ನವನ್ನು ಮಾಡುತ್ತೇವೆ. ಪ್ರಸ್ತುತ ನಾವೆಲ್ಲರೂ ಭಗವಂತನನ್ನು ಹೊಂದುವ ಪ್ರಯತ್ನವನ್ನು ಮಾಡುತ್ತಿದ್ದೇವೆ. ಕೋಟಿಗಳು ಸಂಪಾದಿಸ ಬೇಕೆಂದುಕೊಳ್ಳುತ್ತಿಲ್ಲ, ಎಲ್ಲರಲ್ಲೂ ದೊಡ್ಡವರೆಂದು ಅನಿಸಿಕೊಳ್ಳಬೇಕೆಂದು ಇಲ್ಲ. ನಮ್ಮೆಲ್ಲರ ಆಶಯ ಭಗವಂತನನ್ನು ಹೊಂದುವುದು. ಆದ್ದರಿಂದ ಇರುವುದರಲ್ಲಿಯೇ ಸ್ವಲ್ಪ ಹಂಚಿದಾಗಲೆ ಭಗವಂತನನ್ನು ಹೊಂದುವ ಮಾರ್ಗವನ್ನು ಹೊಂದುತ್ತೇವೆಂದು ತಿಳಿದುಕೊಳ್ಳಬೇಕು. ಅದಕ್ಕೆ ನಾವು ಭಗವಂತನ ಕುರಿತು, ಭಗವಂತನನ್ನು ಹೊಂದುವ ಮಾರ್ಗದ ಕುರಿತು ತಿಳಿದುಕೊಂಡಿದ್ದೇವೆ. ಮುಖ್ಯವಾಗಿ

1. ಭಗವಂತನು ಯಾರು? 2. ಆತನು ಎಲ್ಲಿರುತ್ತಾನೆ? 3. ಆತನು ಏನು ಮಾಡುತ್ತಿರುತ್ತಾನೆ? 4. ಭಗವಂತನನ್ನು ಆಶ್ರಯಿಸಬೇಕೆಂದರೆ ಏನು ಮಾಡಬೇಕು?

ಎಂಬುದನ್ನು ತಿಳಿದುಕೊಂಡಿದ್ದೇವೆ.

ಇವೆಲ್ಲಾ ಯಾರಿಗೆ ತಿಳಿಯುತ್ತವೆ ಎಂದರೆ? ಮಹಾತ್ಮರು ಹೇಳಿದಂತೆ ತಾನು ಸಂಪಾದಿಸಿ, ತಾನು ಉಂಡು ಇತರರಿಗೂ ಹಂಚಿ ಇಟ್ಟಾಗಲೇ ಸಾಧ್ಯವಾಗುತ್ತದೆ. ಅಷ್ಟೇ ಅಲ್ಲ ಭಗವಂತನನ್ನು ಹೊಂದುವ ಮಾರ್ಗ "ಶ್ವಾಸದ ಮೇಲೆ ಗಮನ" ಎಂದೂ ತಿಳಿದುಕೊಂಡಿದ್ದೇವೆ.

ಪತ್ರೀಜಿ ಮಾರ್ಗದಲ್ಲಿ ಇಲ್ಲದವರಿಗೆಲ್ಲಾ ಭಗವಂತನು ಆತ್ಮನೆಂದು ತಿಳಿಯದು. ಅವರು ಭಗವಂತನು ಗುಡಿಗಳಲ್ಲಿ ಇರುತ್ತಾನೆಂದುಕೊಳ್ಳುತ್ತಾರೆ, ಆದರೆ ಸರ್ವ ಜೀವಿಗಳಲ್ಲಿರುತ್ತಾನೆಂದು ತಿಳಿಯದು.

ಭಗವಂತನು ಏನು ಮಾಡುತ್ತಿರುತ್ತಾನೆಂದರೆ? ತೆಂಗಿನಕಾಯಿ ತೆಗೆದುಕೊಂಡು ಕೋರಿದ ಕೋರಿಕೆಗಳನ್ನು ತೀರಿಸುತ್ತಾನೆಂದುಕೊಳ್ಳುತ್ತಾರೆ. ಆದರೆ ಆತನು ಅಂತರಾತ್ಮ ರೂಪದಲ್ಲಿ ನಾವು ಮಾಡುವ ತಪ್ಪುಗಳನ್ನು, ಪಾಪಗಳನ್ನು ಮುಂಚಿತವಾಗಿಯೇ ಎಚ್ಚರಿಸುತ್ತಾನೆಂದು ತಿಳಿಯದು.

ಭಗವಂತನನ್ನು ಹೇಗೆ ಆರಾಧಿಸಬೇಕೆಂದರೆ? ಅರಿಶಿಣ ಕುಂಕುಮ, ಅಕ್ಷತೆ, ಕರ್ಪೂರ, ಊದುಬತ್ತಿಗಳಿಂದ ಪೂಜಿಸಬೇಕೆಂದುಕೊಳ್ಳುತ್ತಾರೆ. ಆದರೆ ಧ್ಯಾನದ ಮೂಲಕ ಆರಾಧಿಸಬೇಕೆಂದು ತಿಳಿಯದು.

ಆದರೆ ಸತ್ಯವಾದ ಭಗವಂತನ ಕುರುತು ಭಗವದ್ಗೀತೆಯಲ್ಲಿ ಶ್ರೀಕೃಷ್ಣ ಭಗವಾನರು ಹೇಳಿದ್ದಾರೆ.

**ಶ್ಲೋ : ಅಹ ಮಾತ್ಮ ಗೂಡಾಕೇಶ ಸರ್ವಭೂತಾಶಯ ಸ್ಥಿತಃ !**

**ಅಹಮಾದಿಶ್ಚ ಮಧ್ಯಂ ಚ ಭೂತಾನಾ ಮಸ್ತ ಏವ ಚ ॥** (ಭ.ಗಿ. 10–20)

**ತಾತ್ಪರ್ಯ : "ಓ, ಅರ್ಜುನಾ ನಾನು ಆತ್ಮನು"** ಎಲ್ಲ ಜೀವಿಗಳಲ್ಲಿ ಸ್ಥಿತವಾಗಿದ್ದೇನೆ. ಸೃಷ್ಟಿ ನಡೆಯುವುದಕ್ಕೆ ಮೊದಲೇ ಇದ್ದೇನೆ, ಸೃಷ್ಟಿ ನಡೆಯುತ್ತಿರುವಾಗ ಇದ್ದೇನೆ, ಸೃಷ್ಟಿಯು ಅಂತ್ಯವಾದರೂ ನಾನು ಇರುತ್ತೇನೆ ಎಂದಿದ್ದಾರೆ.

ಅಂದರೆ ನಾನು ಆತ್ಮನು ಎಂದು ಹೇಳಿದ್ದಾರೆ ಶ್ರೀಕೃಷ್ಣ ಭಗವಾನರು.

ಆತನು ನಾನು ಎಲ್ಲಾ ಪ್ರಾಣಿಗಳಲ್ಲಿ ಆತ್ಮರೂಪದಲ್ಲಿ ಇದ್ದೇನೆ ಎಂದಿದ್ದಾರೆ. ಮತ್ತೆ ಆತ್ಮ ಕಾಣಿಸುತ್ತದೆಯೇ? ಅಂದರೆ ಕಾಣಿಸದು. ಭಗವಂತನು ಶಕ್ತಿಯಾಗಿ ಇದ್ದಾನೆ.

ಭಗವಂತನ ರೂಪವೇ ಶಕ್ತಿ, ಚೈತನ್ಯ, ಆನಂದ, ಅಪಾರವಾದ ಜ್ಞಾನವೇ ಆತನ ಸ್ವರೂಪ. ಆತನು ಎಲ್ಲರ ಶರೀರದಲ್ಲಿ ಆತ್ಮರೂಪದಲ್ಲಿದ್ದು ಸೃಷ್ಟಿ ಧರ್ಮಗಳನ್ನು ನಿಯಮಗಳನ್ನು ಬೋಧಿಸುತ್ತಿರುತ್ತಾನೆ.

ಧರ್ಮ ವಿರುದ್ಧವಾದ ಕೆಲಸಗಳನ್ನು ಮಾಡುತ್ತಿರುವಾಗ ಎಚ್ಚರಿಸುತ್ತಾನೆ. ಅಧರ್ಮವಾಗಿ ವರ್ತಿಸಿದರೆ ನಷ್ಟ ಹೊಂದುವೆ, ಕಷ್ಟಗಳ ಪಾಲಾಗುವೆ ಎಂದು ಆಗಿಂದಾಗ್ಗೆ ಎಚ್ಚರಿಸುತ್ತಲೇ ಇರುತ್ತಾನೆ. ಆತನು ಅನುಕ್ಷಣ ನಮ್ಮ ಧರ್ಮಗಳನ್ನು ನೆನಪು ಮಾಡುತ್ತಿರುತ್ತಾನೆ. ಅದನ್ನೇ ಅಂತರಾತ್ಮ ಪ್ರಬೋಧೆ ಎನ್ನುತ್ತಾರೆ.

ಆದ್ದರಿಂದ ಭಗವಂತನಿಂದ ಸಿಗುತ್ತಿರುವುದೇ ಧರ್ಮವೆಂದು ತಿಳಿದುಕೊಳ್ಳಿ ಬಹಳ ಜನರಿಗೆ ಇದು ಅರ್ಥವಾಗುವುದಿಲ್ಲ, ಭಗವಂತನು ನಮ್ಮ ಧರ್ಮಗಳನ್ನು ಅಂತರಾತ್ಮದಲ್ಲಿ ಹೇಳುತ್ತಿದ್ದಾನೆಂದು ತಿಳಿಯದು. ತಿಳಿಯದೆ ಹೋಗಲು ಕಾರಣ ಮಲಿನವಾಗಿರುವ ಮನಸ್ಸೇ.

ಆದರೆ ಧ್ಯಾನದ ಮುಖಾಂತರ ಮನಸ್ಸು ಶುದ್ಧಿ ಮಾಡಿಕೊಂಡವನು ಭಗವಂತನು ಬೋಧಿಸುವ ಧರ್ಮವನ್ನು ತಿಳಿದುಕೊಳ್ಳಬಲ್ಲವನಾಗುತ್ತಾನೆ. ನಾವೆಲ್ಲರೂ ಭಗವಂತನನ್ನು ಹೊಂದುವ ಮಾರ್ಗವನ್ನು ತಿಳಿದುಕೊಂಡಿದ್ದೇವೆ, ಭಗವಂತನನ್ನು ಹೊಂದುವ ಅರ್ಹತೆ ನಮಗೆ ಇದೆಯಾದ್ದರಿಂದ ಪತ್ರೀಜಿಯವರನ್ನು ಅನುಸರಿಸಬಲ್ಲವರಾದೆವು.

ಈ ಧ್ಯಾನ ಮಾರ್ಗದಲ್ಲಿ ಬರುವುದು, ತೀವ್ರವಾಗಿ ಧ್ಯಾನ ಮಾಡುವ ಅವಕಾಶ ಲಭಿಸುವುದು ಯಾವ ಜನ್ಮದಲ್ಲಿಯೋ ಮಾಡಿಕೊಂಡ ಪುಣ್ಯದಿಂದಲೇ ಸಾಧ್ಯವಾಗಿದೆ.

ಸಹಜವಾಗಿ ಯಾರಾಗಲಿ ಭೂಮಿಯ ಮೇಲೆ ಬರುವ ಮೊದಲು ಧ್ಯಾನವನ್ನು ಮಾಡಬೇಕು, ಜ್ಞಾನವನ್ನು ಸಂಪಾದಿಸಬೇಕು ಎಂದು ನಿರ್ಣಯಿಸಿಕೊಂಡು ಬರುತ್ತಾರೆ. ಮೇಲಿನ ಲೋಕಗಳಿಂದ ಭೂಮಿಯ ಮೇಲೆ ಬರುವ ಮೊದಲು ಹೇಗೆ ಜೀವಿಸಬೇಕು? ಏನು ಸಾಧಿಸಬೇಕು? ಎಂಬ ಪ್ರಣಾಳಿಕೆಯನ್ನು ಹಾಕಿಕೊಂಡು ಬರುತ್ತಾರೆ, ಆದರೆ ಬಂದ ನಂತರ ಎಲ್ಲಾ ಮರೆತು ಹೋಗುತ್ತಾರೆ.

ಕಾರಣ ಯಾವ ಮತದಲ್ಲಿ ಜನಿಸುತ್ತಾರೋ ಆ ಮತದ ಪ್ರಭಾವ ಅವರ ಮೇಲೆ ಇರುತ್ತದೆ. ಯಾವ ಕುಲದಲ್ಲಿ ಜನಿಸುತ್ತಾರೋ ಆ ಕುಲದ ಪ್ರಭಾವ ಕೂಡಾ ಅವರ ಮೇಲೆ ಇರುತ್ತದೆ. ಆದ್ದರಿಂದ ಯಾವ ಕುಟುಂಬದಲ್ಲಿ ಜನಿಸುತ್ತಾರೋ ಆ ಕುಟುಂಬದ ಪ್ರಭಾವವು ಕೂಡಾ ಅವರ ಮೇಲೆ ಇರುತ್ತದೆ. ಆದ್ದರಿಂದ ಇವುಗಳೆಲ್ಲದರ ಪ್ರಭಾವದಿಂದ ಯಾರಾದರು ನಿರ್ಣಯಿಸಿಕೊಂಡದ್ದು ಒಂದು, ಮಾಡುತ್ತಿರುವುದು ಇನ್ನೊಂದು ಆಗುತ್ತದೆ. ಆದರೆ ಪ್ರಕೃತಿಗೆ ವಿರುದ್ಧವಾಗಿ ಭಿನ್ನವಾಗಿ ವ್ಯವಹರಿಸುತ್ತಿದ್ದರೆ ಪ್ರಕೃತಿ ಒಪ್ಪಿಕೊಳ್ಳುವುದಿಲ್ಲ.

ಯಾವುದೋ ಒಂದು ರೂಪದಲ್ಲಿ ಭಗವಂತನೆಡೆಗೆ ನಡೆಸುತ್ತದೆ. ಹಾಗೆ ನಮ್ಮಲ್ಲಿ

ಬಹಳ ಜನರಿಗೆ ಪ್ರಚಾರದ ಹಾಳೆಗಳ ಮೂಲಕ, ಸ್ನೇಹಿತರ ಮೂಲಕ, ಬಂಧುಗಳ ಮೂಲಕ ಧ್ಯಾನ ಮಾರ್ಗವು ಪರಿಚಯವಾಗಿದೆ. ಹಾಗೆಯೇ ಕೆಲವು ಜನ ರೋಗಗಳಿಂದ ಬರುತ್ತಾರೆ, ಕೆಲವರು ಅಶಾಂತಿಯಿಂದ ಬರುತ್ತಾರೆ, ಕೆಲವರು ಸಮಸ್ಯೆಗಳಿಂದ ಬರುತ್ತಾರೆ. ಈ ಮಾರ್ಗದಲ್ಲಿ ಬಂದು ಈ ಕೆಲಸ ಮಾಡುತ್ತಿದ್ದಂತೆಲ್ಲಾ ಎಲ್ಲವೂ ಅನುಕೂಲಿಸುತ್ತದೆ. ಜೀವನವು ಆರಾಮವಾಗಿ, ಪ್ರಶಾಂತವಾಗಿ ಇರುತ್ತದೆ.

ನಾನು ವ್ಯಾಪಾರದಲ್ಲಿ 30 ವರ್ಷ ಕಳೆದೆನು, ತರತರದ ವ್ಯಾಪಾರಗಳನ್ನು ಮಾಡಿದೆನು. ಆದರೆ ನಾನು ಮಾಡಬೇಕಾದದ್ದು ಎಲ್ಲರಿಗೂ ಜ್ಞಾನವನ್ನು ಕೊಡುವುದು, ಆದರೆ ಅದನ್ನು ಮಾಡದೇ ಬೇರೆ ಮಾಡುತ್ತಿದ್ದರೆ ನನಗೆ ಒಂದೇ ಬಾರಿಗೆ ಎಲ್ಲಾ ವಿರುದ್ಧವಾದವು. ಆ ಸಮಯದಲ್ಲಿ ಪತ್ರೀಜಿಯವರ ಪರಿಚಯವಾಯಿತು.

ಪತ್ರೀಜಿಯವರು ಹೇಳಿದವುಗಳಿಂದ ಆತನ ಬಗ್ಗೆ ಆಕರ್ಷಿತನಾಗಿ ಎಲ್ಲವನ್ನು ಬಿಟ್ಟು ಈ ಮಾರ್ಗವನ್ನು ಹಿಡಿದುಕೊಂಡೆನು. ಧ್ಯಾನವನ್ನು ಮಾಡುತ್ತಾ, ಜ್ಞಾನವನ್ನು ಸಂಪಾದಿಸಿ ಎಲ್ಲರಿಗೂ ಹಂಚುತ್ತಿದ್ದುದರಿಂದ ಮತ್ತೆ ಕುಟುಂಬದಲ್ಲಿ ಅವರ ಸಹಕಾರ ದೊರೆಯಿತು. ಅಮ್ಮನ ಸಹಕಾರದಿಂದ 2004ರಲ್ಲಿ ನಿರಂತರವಾಗಿ ಇಲ್ಲಿಯವರೆಗೆ ಆತ್ಮಜ್ಞಾನ ಶಿಕ್ಷಣ ಶಿಬಿರಗಳಲ್ಲಿ ತರಗತಿಗಳನ್ನು ನಿರ್ವಹಿಸುತ್ತಿದ್ದೇವೆ. ಎಷ್ಟೋ ಜನರಿಗೆ ಜ್ಞಾನವನ್ನು ಕೊಡಬಲ್ಲವರಾಗಿದ್ದೇವೆ.

ಪ್ರಪಂಚದಲ್ಲಿ ಎಷ್ಟೋ ಲಕ್ಷದ ಜನ ಧ್ಯಾನ ಮಾಡದೇ ಇದ್ದಾರೆ. ಈ ಮಾರ್ಗದೊಳಗೆ ಬಂದ ನೀವು ಮಾತ್ರ ತೀವ್ರ ಸಾಧನೆ ಮಾಡುತ್ತಾ, ಜ್ಞಾನವನ್ನು ಹೊಂದುವುದೇ ಅಲ್ಲ, ಹೊಂದಿದ ಜ್ಞಾನವನ್ನು ಹಂಚುತ್ತಿದ್ದೀರಿ. ಹಾಗೆ ಮಾಡುತ್ತಿರುವಾಗ ಎಲ್ಲವು ಆರಾಮವಾಗಿ ಸಾಗುತ್ತವೆ. ಎಲ್ಲವೂ ಹೊಂದಿಕೆಯಾಗುತ್ತದೆ. ಆದರೆ ಮಾಡಬಾರದ ಕೆಲಸಗಳು ಮಾಡುತ್ತಿದ್ದರೆ ಯಾವುವು ಹೊಂದಿಕೆಯಾಗುವುದಿಲ್ಲ.

ಆದೇ ನಮ್ಮ ಪ್ರಣಾಳಿಕೆಗೆ ಅನುಗುಣವಾಗಿ ಜೀವಿಸಿದರೆ ಎಂತಹ ಸಮಸ್ಯೆಗಳು ಇರುವುದಿಲ್ಲ, ಎಲ್ಲವೂ ಅನುಕೂಲಿಸುತ್ತವೆ. ಆದ್ದರಿಂದ ಪಕ್ಕದವರೊಂದಿಗೆ ಹೋಲಿಸಿಕೊಳ್ಳಬೇಕಾದ ಕೆಲಸವಿಲ್ಲ. ಪಕ್ಕದವನ ವರ್ತನೆಯೊಂದಿಗೆ ಹೋಲಿಸಿಕೊಂಡರೆ ನಮ್ಮ ವರ್ತನೆ ಭಿನ್ನವಾಗಿರುತ್ತವೆ, ನಾವು ಓದುವ ಪುಸ್ತಕಗಳು, ವಿಡಿಯೋಗಳ ಮೂಲಕ ಕೇಳುವ ಸಂದೇಶಗಳು ಕೂಡಾ ಪಕ್ಕದವರಿಗಿಂತ ಭಿನ್ನವಾಗಿರುತ್ತವೆ. ಅಷ್ಟೇ ಅಲ್ಲ ನಮ್ಮ ಜೀವನದಲ್ಲಿ ಮೊದಲು ಇರುವ ವರ್ತನೆಯಾಗಲಿ, ಮಾತುಗಳಾಗಲಿ, ಕೆಲಸಗಳಾಗಲಿ ಇಲ್ಲಿಯವರೆಗಿನ ಜೀವನಕ್ಕೆ ಬಹಳ ಭಿನ್ನವಾಗಿರುತ್ತವೆ.

ನಿಮಗೆ ಹುಚ್ಚು ಹಿಡಿದಿದೆಯೆ? ಎಂದು ಯಾರಾದರೂ ನಿಮ್ಮನ್ನು ಅಂದರೆ ನೀವು

ಆಧ್ಯಾತ್ಮಿಕವಾಗಿ ಬೆಳೆದಂತೆ. ಗಮನಿಸಿದರೆ ಲೋಕದಲ್ಲಿರುವವರು ಒಂದು ರೀತಿಯಲ್ಲಿ ಜೀವಿಸುತ್ತಾರೆ, ಆದರೆ ಈ ಮಾರ್ಗದೊಳಗೆ ಬಂದವರು ಇನ್ನೊಂದು ರೀತಿಯಲ್ಲಿ ಜೀವಿಸುತ್ತಿರುತ್ತಾರೆ.

ಆದರೆ ಆತ್ಮಕ್ಕೆ ಭಿನ್ನವಾಗಿ ವರ್ತಿಸಿದರೆ ಕ್ಷೋಭೆ ಮೊದಲಾಗುತ್ತದೆ. ನಾವು ಮಾಡಬೇಕಾದದ್ದು ಮಾಡದೇ ಬೇರೆ ಮಾಡುವುದರಿಂದ ಆತ್ಮ ಕ್ಷೋಭಿಸುತ್ತದೆ, ಅದನ್ನೇ 'ಆತ್ಮ ಘೋಷ' ಎನ್ನುತ್ತಾರೆ, ಆಗ ನಮಗೆ ಕಷ್ಟಗಳು ಮೊದಲಾಗುತ್ತವೆ.

ಪತ್ರೀಜಿಯವರು ಭಗವಂತನನ್ನು ಸೇರುವುದಕ್ಕೆ ಹೇಳಿದ ಮಾರ್ಗವೇ "ಶ್ವಾಸದ ಮೇಲೆ ಗಮನ ಧ್ಯಾನ" ನಾವು ಸಮಸ್ಯೆಗಳು ಅಂದುಕೊಳ್ಳುತ್ತೇವೆ, ಆದರೆ ಅವು ಸಮಸ್ಯೆಗಳು ಅಲ್ಲ, ನಾವು ಮಾಡಬೇಕಾದವು ಮಾಡದಿದ್ದರೆ ಸಮಸ್ಯೆಗಳು ಹಾಗೆಯೇ ಇರುತ್ತವೆ. ಮಾಡಬೇಕಾದವುಗಳನ್ನು ಮಾಡಿದರೆ ಸಮಸ್ಯೆಗಳು ಇರುವುದಿಲ್ಲ.

**2. ಮಹಾತ್ಮರು ಇನ್ನೂ ಏನು ಹೇಳಿದ್ದಾರೆಂದರೆ? "ಭಗವಂತನನ್ನು ಆಶ್ರಯಿಸಬೇಕೆಂದರೆ ಯಾವ ಜೀವಿಗೆ ಬಾಧೆ ಉಂಟು ಮಾಡಬಾರದು. ಜೀವ ಹಿಂಸೆ ಮಾಡಬಾರದು, ಯಾವ ಜೀವಿಗೆ ಹಾನಿ ಮಾಡಬಾರದು."**

ಋಷಿಗಳು, ಮಹರ್ಷಿಗಳು ಅಡವಿಗಳಲ್ಲಿರುತ್ತಾರೆ. ಎಂತಹ ಕ್ರೂರಮೃಗವು ಕೂಡಾ ಅವರಿಗೆ ಹಾನಿ ಮಾಡುವುದಿಲ್ಲ. ಕಾರಣ ಅವರು ಯಾವ ಜೀವಿಗೂ ಹಾನಿ ಮಾಡರು, ಮೇಲಾಗಿ ಅವುಗಳೊಂದಿಗೆ ಸ್ನೇಹ ಭಾವದಿಂದ ಜೀವಿಸುತ್ತಾರೆ.

ಸ್ವಾಮಿ ರಾಮರವರು ಜೇನುಗೂಡು ಇರುವ ಮರವನ್ನು ಹತ್ತಿ ಹಣ್ಣನ್ನು ಕೊಯ್ದುಕೊಂಡು ಕೆಳಗೆ ಇಳಿದರು. ಅಂದರೆ ಜೇನುಹುಳುಗಳು ಆತನನ್ನು ಏನೂ ಮಾಡಲಿಲ್ಲವೆಂದು ತಿಳಿದುಕೊಳ್ಳಬೇಕು.

ಅಂದರೆ ನಾವು ಯಾವ ಜೀವಿಯ ಗೊಡವೆಗೆ ಹೋಗದಿದ್ದರೆ, ಯಾವ ಜೀವಿಯು ನಮ್ಮ ಗೊಡವೆಗೆ ಬರದು. ಆ ಮಹಾನುಭಾವರು, ದೊಡ್ಡವರು ಪ್ರತಿ ಜೀವಿಯು ಭಗವತ್ ಸ್ವರೂಪವೇ! ಯಾವ ಜೀವಿಯನ್ನು ಹಿಂಸಿಸಿದರೂ ಭಗವಂತನನ್ನು ಹಿಂಸಿಸಿದಂತೆ ಎಂದು ತಿಳಿದುಕೊಂಡರು.

ಆದ್ದರಿಂದ ಜೀವಿಯನ್ನು ಬಾಧಿಸಿದರೆ ಭಗವಂತನನ್ನು ಬಾಧಿಸಿದಂತೆ! ಭಗವಂತನನ್ನು ಹಿಂಸಿಸಿದವರು, ಭಗವಂತನನ್ನು ಹೊಂದುವ ಮಾರ್ಗವನ್ನು ಹೇಗೆ ಹೊಂದುತ್ತಾರೆ? ಮಾರ್ಗವನ್ನೇ ಹೊಂದದಿದ್ದರೆ ಭಗವಂತನನ್ನು ಹೇಗೆ ಹೊಂದುತ್ತಾರೆ? ಭಗವಂತನನ್ನು ಆಶ್ರಯಿಸಿದರೇನೆ ಅಲ್ಲವೇ, ದುಃಖದಿಂದ ಹೊರಬರುವುದು!

ಯಾವ ಜೀವಿಯಾದರೂ ಕೊಯ್ಯುತ್ತಿರುವಾಗ ಕೊಯ್ದುಕೊ ಎಂದು ಹೇಳದು. ಆದ್ದರಿಂದ ಮನೆಗೆ ಬಂದ ಬಂಧುಗಳನ್ನು, ಸ್ನೇಹಿತರನ್ನು ಸಂತೋಷಪಡಿಸುವುದಕ್ಕಾಗಿ ಮಾಂಸಾಹಾರವನ್ನು ಇಡಬಾರದು.

ಬಹಳಷ್ಟು ಜನರು ಹಿಂದಿನ ಜನ್ಮದಲ್ಲಿ ಭಗವಂತನನ್ನು ಹೊಂದುವ ಅರ್ಹತೆಯನ್ನು ಸಂಪಾದಿಸಿದ್ದಾರೆ. ಆದರೆ ಜನ್ಮ ತೆಗೆದುಕೊಂಡ ಮೇಲೆ ಕುಟುಂಬದ ಪ್ರಭಾವದಿಂದ, ಸಮಾಜ ಪ್ರಭಾವದಿಂದ, ಮಾಡಬಾರದ ಕೆಲಸಗಳನ್ನು ಮಾಡುತ್ತಿದ್ದಾರೆ. ಮಾನವರು ಜಂತುಗಳನ್ನು, ಪಕ್ಷಿಗಳನ್ನು ತಿನ್ನುವುದಕ್ಕೆ ಭೂಮಿಗೆ ಬಂದಿಲ್ಲ, ಆದರೆ ಅವರ ತಂದೆ ತಾಯಿಗಳು ಮಾಂಸಾಹಾರವನ್ನು ಅಭ್ಯಾಸ ಮಾಡಿದ್ದಾರೆ. ಆದರೆ ಧ್ಯಾನ ಮಾರ್ಗದೊಳಗೆ ಬಂದ ತಕ್ಷಣವೇ ತಿಳಿದುಕೊಂಡು ಬಿಡುತ್ತಾರೆ. ಹಾಗೆ ಸಾಧನೆ ಮಾಡುವುದಕ್ಕೆ ಆಸಕ್ತಿ ತೋರಿಸುತ್ತಾರೆ.

ಧ್ಯಾನದಲ್ಲಿ ಬರಬೇಕೆಂದರೆ ಪೂರ್ವಜನ್ಮದ ಸುಕೃತವಿರಬೇಕು. ಅಂದರೆ ಹಿಂದಿನ ಜನ್ಮದಲ್ಲಿ ಪುಣ್ಯ ಮಾಡಿ ಅರ್ಹತೆ ಸಂಪಾದಿಸಿಕೊಂಡಿರಬೇಕು. ಆದರೆ ಪರಿಸ್ಥಿತಿಗಳ ಪ್ರಭಾವದಿಂದ ಹಾಗೆ ಇದ್ದಾರೆ. ಅದಕ್ಕೆ ಪತ್ರೀಜಿಯವರು ಊರೂರು ತಿರುಗಿ ಧ್ಯಾನವನ್ನು ಹೇಳುತ್ತಾರೆ. ರಾಜ್ಯಗಳೇ ಅಲ್ಲ ದೇಶಗಳಗಳಿಗೆ ಹೋದರು. "ಶ್ವಾಸದ ಮೇಲೆ ಗಮನ ಧ್ಯಾನ" ಹೇಳಿದರು. ಆದರೆ ಕೆಲವರು ಧ್ಯಾನ ಮಾಡಿದರೆ ಲಾಭಗಳು ಬರುತ್ತದೆ ಎಂದು, ಅನುಭವಗಳನ್ನು ಹೊಂದಬಹುದೆಂದು, ರೋಗಗಳನ್ನು ಕಳೆದುಕೊಳ್ಳಬಹುದೆಂದು, ಕೋರಿಕೆಗಳು ನೆರವೇರುತ್ತವೆ ಎಂದು ಧ್ಯಾನಕ್ಕೆ ಬರುತ್ತಾರೆ.

ಈ ರೀತಿ ವಿವಿಧ ರೀತಿಯ ಲಾಭಗಳನ್ನು ಆಶಿಸಿ ಧ್ಯಾನವನ್ನು ಮಾಡುತ್ತಿದ್ದಾರೆ. ಆದರೆ ಅರ್ಹತೆ ಇಲ್ಲದಿರುವುದರಿಂದ ಧ್ಯಾನದಲ್ಲಿ ಬಂದರೂ ಧ್ಯಾನವನ್ನು ಮಾಡಲಾರದೆ ಹೋಗುತ್ತಿದ್ದಾರೆ. ಪತ್ರೀಜಿಯವರು ಧ್ಯಾನವೆಂದರೆ "ಶ್ವಾಸದ ಮೇಲೆ ಗಮನ" ಎಂದರು. ಆದರೆ ಬಹಳ ಜನರಿಗೆ ಧ್ಯಾನವೆಂದರೆ ಏನು ಎಂದು ಅರ್ಥವಾಗದೆ "ಮಾತಿನ ಮೇಲೆ ಗಮನ" ಎಂದು "ಮ್ಯೂಜಿಕ್ ಮೇಲೆ ಧ್ಯಾನ" ಎಂದು ಮಾಡುತ್ತಿದ್ದಾರೆ.

ಆದರೆ ಪತ್ರೀಜಿಯವರು ಹೇಳಿದ್ದು "ಶ್ವಾಸದ ಮೇಲೆ ಗಮನ". ಧ್ಯಾನದಲ್ಲಿ ಆಲೋಚನೆಗಳು ಇಲ್ಲದ ಸ್ಥಿತಿಯಲ್ಲಿ, ಮನಸ್ಸು ಕೆಲಸದ ಮಾಡದ ಸ್ಥಿತಿಯಲ್ಲಿ ಶಕ್ತಿ ಬರುತ್ತದೆ.

ಪತ್ರೀಜಿಯವರು ಮ್ಯೂಜಿಕ್ ಮೆಡಿಟೇಷನ್ ಏಕೆ ಮಾಡಿಸುತ್ತಿದ್ದಾರೆ? ಅಂದರೆ

ಹೊಸಬರಿಗೆ ಅಭ್ಯಾಸವಾಗಲಿ ಎಂದು. ಅದಕ್ಕೆ ದೊಡ್ಡವರು "ಹೇಳಿದ್ದು ಮಾಡಬೇಕು, ಆದರೆ ಮಾಡಿದ್ದು ಮಾಡಬಾರದು" ಎಂದು ತಿಳಿದುಕೊಳ್ಳಬೇಕು.

ಆಲೋಚನೆಗಳಿಂದ ಆರಾಮವಾಗಿ ಹೊರಬರುವ ಹಗುರವಾದ, ಸುಲಭವಾದ ಮಾರ್ಗ "ಶ್ವಾಸದ ಮೇಲೆ ಗಮನ". ಧ್ಯಾನದಲ್ಲಿ ಗಂಟೆ ಗಟ್ಟಲೆ ಕುಳಿತುಕೊಳ್ಳಬೇಕು ಅಂದರೆ ಮನಸ್ಸಿನಲ್ಲಿಯ ಆಲೋಚನೆಗಳು ಖಾಲಿಯಾಗಬೇಕು, ಆಲೋಚನೆಗಳು ಬಂದರೆ ಕುಳಿತುಕೊಳ್ಳಲಾರರು. ಮನಸ್ಸಿನಲ್ಲಿರುವ ಕಸದ ಆಲೋಚನೆಗಳನ್ನು ಖಾಲಿ ಮಾಡಿಕೊಳ್ಳುವ ಮಾರ್ಗವೇ "ಶ್ವಾಸದ ಮೇಲೆ ಗಮನ".

ಈ ಮಾರ್ಗವನ್ನು ಬಿಟ್ಟರೆ ಹೊರತು ಇನ್ನೇನು ಮಾಡಿದರೂ ಆಲೋಚನೆಗಳು ಹೆಚ್ಚುತ್ತವೆ ಹೊರತು ಕಡಿಮೆಯಾಗವು. ಅಸಲು ದಿನ ದಿನಕ್ಕೂ ಆಲೋಚನೆಗಳು ಹೇಗೆ ಬೆಳೆಯುತ್ತವೆ ಅಂದರೆ?

**ಉದಾ :**

1. ಗಮನಿಸಿ, ಪಕ್ಕದ ಮನೆಯಲ್ಲಿ ಗಂಡ-ಹೆಂಡತಿ ಜಗಳವಾಡುತ್ತಿದ್ದಾರೆಂದು ಅವರ ಮನೆಗೆ ಹೋಗುತ್ತಾರೆ. ಅಲ್ಲಿ ಹೆಂಡತಿ ಒಂದು ವಿಧವಾಗಿ ಹೇಳುತ್ತಾಳೆ, ಗಂಡನು ಒಂದು ವಿಧವಾಗಿ ಹೇಳುತ್ತಾನೆ, ಇವರಿಗೆ ತಲೆ ತಿರುಗಿಬಿಡುತ್ತದೆ. ನೀವು ಧ್ಯಾನದಲ್ಲಿ ಕುಳಿತ ತಕ್ಷಣವೆ ಅವುಗಳೇ ನೆನಪಿಗೆ ಬರುತ್ತವೆ. ಅಲ್ಲಿಗೆ ಹೋಗದಿದ್ದರೆ ಅಂತಹ ಯಾವ ಆಲೋಚನೆಗಳು ಬರುವುದಿಲ್ಲವಲ್ಲ?

2. ನೋಡಿ, ಕೆಲವು ಜನ 3 ದಿನಗಳ ತರಗತಿ ಬಂದು ಫೋನ್ ಮಾಡಿ ಅಲ್ಲಿಯ ವಿಷಯಗಳನ್ನು ಕೇಳುತ್ತಾರೆ! ಅವರು ಮತ್ತೆ ಧ್ಯಾನದಲ್ಲಿ ಕುಳಿತ ತಕ್ಷಣ ಆ ವಿಷಯಗಳೇ ಆಲೋಚನೆಗಳಾಗಿ ಬರುತ್ತವೆ.

3. ಚುನಾವಣೆಯಲ್ಲಿ ಸೋತರೆ ಆ ಆಲೋಚನೆಗಳಿಂದ ಹೊರಬರಬೇಕೆಂದರೆ ವರ್ಷಗಳು ಬೇಕಾಗುತ್ತವೆ. ಯಾವ ವಿಷಯಗಳಾಗಲಿ ಒಳಗೆ ಹೋಗುವುದು ಸುಲಭ. ಆದರೆ ಹೊರಬರುವುದು ಬಹಳ ಕಷ್ಟ.

ನೆನಪಿಟ್ಟುಕೊಳ್ಳಿ ಲೋಕದ ಜನರಿಗೆ ಒಳ್ಳೆಯದು ಮಾಡಿದರೆ ಲೋಕೇಶನು ನಮಗೆ ಒಳ್ಳೆಯದು ಮಾಡುತ್ತಾನೆ. ಏನು ಮಾಡದೆ ನಾನು ಚೆನ್ನಾಗಿರಬೇಕೆಂದುಕೊಂಡರೆ ಎಂದಿಗೂ ಚೆನ್ನಾಗಿರುವುದಿಲ್ಲ. ಇತರರ ಒಳ್ಳೆಯದನ್ನು ನೋಡಿದಾಗಲೇ, ಭಗವಂತನು ನಮ್ಮ ಒಳ್ಳೆಯದನ್ನು ನೋಡುತ್ತಾನೆ.

ಸಾಧ್ಯವಾದಷ್ಟುಮಟ್ಟಿಗೆ ಅವರ ಸ್ಥಾಯಿಗೆ ಮಟ್ಟಕ್ಕೆ ತಕ್ಕಷ್ಟು ಅವರು ಧ್ಯಾನವನ್ನು

ಮಾಡಬೇಕು. **"ನಮ್ಮಿಂದಾಗಲಿ ಇತರರಿಗೆ ನಷ್ಟವಾಗಲಿ, ನೋವಾಗಲಿ ಆಗದಂತೆ ಜೀವಿಸಬೇಕು, ಇದೇ ಮಹಾತ್ಮರು ಕೊಟ್ಟ ಸಂದೇಶ."**

"ಶ್ವಾಸದ ಮೇಲೆ ಗಮನ" ಇಟ್ಟಾಗಲೆ ಆಲೋಚನೆಗಳು ಕಡಿಮೆಯಾಗುತ್ತಾ ಬರುತ್ತವೆ. ಆಲೋಚನೆಗಳು ಖಾಲಿಯಾದರೇನೇ ಧ್ಯಾನದಲ್ಲಿ ಗಂಟೆ ಗಟ್ಟಲೆ ಕುಳಿತುಕೊಳ್ಳಬಲ್ಲಿರಿ, ಎಷ್ಟೋ ಲಾಭಗಳನ್ನು ಹೊಂದಬಲ್ಲಿರಿ. ಧ್ಯಾನವು ಸಾಮಾನ್ಯವಾದದ್ದು ಅಲ್ಲ, ಧ್ಯಾನವನ್ನು ಲಾಭಕ್ಕಾಗಿ ಅಲ್ಲದೆ ಜ್ಞಾನಕ್ಕಾಗಿ ಮಾಡಿದರೆ ಎಷ್ಟೋ ದೊಡ್ಡವರಾಗುತ್ತೀರಿ.

**"ನಮ್ಮೆಲ್ಲರಿಗೂ ಭಗವಂತನನ್ನು ಸೇರಿಕೊಳ್ಳುವ ಮಾರ್ಗವು ಅಂದರೆ ಧ್ಯಾನವು ದೊರಕಿದೆ, ಅಂದರೆ ನಮಗೆ ಅರ್ಹತೆ ಇದ್ದಂತೆಯೇ. ಅರ್ಹತೆ ಇದ್ದರೇನೇ ಈ ಮಾರ್ಗದಲ್ಲಿ ಬರುತ್ತೀರಿ. ಒಂದು ವಿಷಯವನ್ನು ನೆನಪಿಟ್ಟುಕೊಳ್ಳಿ! ಮಹನೀಯರು ಹೇಳಿದ್ದನ್ನು ಮಾಡಬೇಕು, ಆದರೆ ಅವರು ಮಾಡಿದ್ದನ್ನು ಮಾಡಬಾರದು."**

ಪ್ರಪಂಚದಲ್ಲಿರುವವರನ್ನು ಗಮನಿಸಿದರೆ ಎಷ್ಟೋ ಸಮಸ್ಯೆಗಳಿಂದ ಒದ್ದಾಡುತ್ತಿದ್ದಾರೆ. ಒಬ್ಬೊಬ್ಬರದು ಒಂದೊಂದು ರೀತಿಯಾದ ಸಮಸ್ಯೆ. ಸಮಸ್ಯೆ ಎಂಬುದು ಬಹಳ ಕಷ್ಟಕರ, ತಡೆದುಕೊಳ್ಳುವುದು ಕಷ್ಟ. ಆ ಸಮಸ್ಯೆಗಳಿಂದ ನೋವು ಪಡುತ್ತಿರುವವರಿಗೆ ಶಾಂತಿ ಇರುವುದಿಲ್ಲ. ಯಾವ ಕೆಲಸವನ್ನಾಗಲಿ ಉತ್ಸಾಹದಿಂದ ಮಾಡಲಾರರು, ಏಕಪ್ಪ! ಈ ಜೀವನ ಎಂದೆನಿಸುತ್ತದೆ. ಸಮಸ್ಯೆಯು ಏಕೆ ಬಂದಿತೆಂದು ತಿಳಿಯದೆ, ನನಗೇ ಏಕೆ ಬಂದಿತು? ಎಂದು ಸಂಕಟಪಡುತ್ತಾರೆ. ಏನೂ ಮಾಡಲಾರದೆ ಭಗವಂತನನ್ನು ನಿಂದಿಸುತ್ತಾರೆ. ಭಗವಂತನು ನನ್ನನ್ನು ಕಷ್ಟಕ್ಕೆ ಗುರಿ ಮಾಡುತ್ತಿದ್ದಾನೆ ಎಂದು ಅಂದುಕೊಳ್ಳುತ್ತಾರೆ. ಹಾಗೆ ಯಾರನ್ನು ನೋಡಿದರೂ ಸಮಸ್ಯೆಗಳಲ್ಲಿ ಇದ್ದಾರೆ.

ಪತ್ರೀಜಿಯವರು **"ಅವರ ವಾಸ್ತವಕ್ಕೆ ಅವರೇ ಸೃಷ್ಟಿಕರ್ತರು"** ಎಂದಿದ್ದಾರೆ. ಅಂದರೆ **"ನನ್ನ ಕಷ್ಟಗಳನ್ನು ನಾನೇ ಸೃಷ್ಟಿಸಿಕೊಂಡಿದ್ದೇನೆ, ಅಂದರೆ ನಾನೇ ಕಾರಣ"** ಎಂದು ತಿಳಿದುಕೊಳ್ಳಬೇಕು.

ಬಹಳಷ್ಟು ಜನರು ಮಾಂಸ ತಿನ್ನದೇ ಹೋದರೆ ಬಲ ಹೇಗೆ ಬರುತ್ತದೆ? ಎನ್ನುತ್ತಾರೆ. ಆದರೆ ಮಾಂಸಾಹಾರವು ಹಿಂಸೆ ಮಾಡಿದರೇನೆ ಬರುತ್ತದೆ. ಅಷ್ಟೇ ಅಲ್ಲ ಎಂತಹ ಹಿಂಸೆ ಮಾಡಿದರೆ ಅಂತಹ ಹಿಂಸೆ ಅನುಭವಿಸುತ್ತೀರಿ, ಮಾಡಿದ್ದೆ ಅನುಭವಿಸುತ್ತೀರಿ. ಗಮನಿಸಿದರೆ ಮಾಡುವುದು, ಸುಲಭ, ಅನುಭವಿಸುವುದು ಕಷ್ಟ. ನೋಡಿ, ಕೋಳಿಯ ಕುತ್ತಿಗೆಯನ್ನು ಕೊಯ್ಯುತ್ತಾರೆ, ಸ್ವಲ್ಪದಿನಗಳಲ್ಲಿ ಸ್ಪಾಂಡಿಲೈಟೀಸ್

ವ್ಯಾಧಿಯಿಂದ ಅವರು ಕುತ್ತಿಗೆಗೆ ಬ್ಯಾಂಡೇಜ್ ಹಾಕಿಕೊಳ್ಳುತ್ತಾರೆ. ಅಂದರೆ ಮಾಡಿದ್ದೇ ಅನುಭವಿಸುತ್ತಿದ್ದಾರೆ, ಮಾಡದಿದ್ದರೆ ಅನುಭವಿಸುವುದಿಲ್ಲವಲ್ಲ?

ಆದ್ದರಿಂದ ಈಗಿನಿಂದಲಾದರೂ ಜೀವನವನ್ನು ಬದಲಾಯಿಸಿಕೊಳ್ಳುವ ಅಭ್ಯಾಸ ಮಾಡಿಕೊಳ್ಳಬೇಕು. ಧ್ಯಾನ ಮಾಡಿ ರೋಗ ತಗ್ಗಿಸಿಕೊಳ್ಳುವುದು ಮುಖ್ಯವಲ್ಲ. ಧ್ಯಾನ ಮಾಡಿ ಜ್ಞಾನವನ್ನು ಸಂಪಾದಿಸಿಕೊಳ್ಳಬೇಕು ಎನ್ನುವುದೇ ಮುಖ್ಯ.

**1. ಜ್ಞಾನವೆಂದರೆ ನಮ್ಮ ಕಣ್ಣಿಗೆ ಕಾಣಿಸದವುಗಳ ಕುರಿತು ತಿಳಿದುಕೊಳ್ಳುವುದು.**

**2. ಜ್ಞಾನವೆಂದರೆ ನಾನು ದೇಹವಲ್ಲ, ನಾನು ಆತ್ಮನು ಎಂದು ತಿಳಿದುಕೊಳ್ಳುವುದು ಎಂದು ಪತ್ರೀಜಿಯವರು ಹೇಳಿದ್ದಾರೆ.**

ಸೃಷ್ಟಿಯಲ್ಲಿ ಕಣ್ಣಿಗೆ ಕಾಣಿಸುವುದು ಉಗುರಿನಷ್ಟು ಆದರೆ, ಕಾಣಿಸದೇ ಇರುವುದು ಮೇರು ಪರ್ವತದಷ್ಟು ಇರುತ್ತದೆ. ಈ ಜೀವನವೇ ಅಲ್ಲದೇ ಕಣ್ಣಿಗೆ ಕಾಣಿಸದ ಜೀವನವು ಕೂಡಾ ಬಹಳ ಇದೆ.

ದೇಹದೊಡನೆ ಇರುವಾಗ ಕಣ್ಣಿಗೆ ಕಾಣಿಸುವ ಜೀವನವನ್ನು ಜೀವಿಸುತ್ತಾರೆ. ಸತ್ತ ನಂತರ ದೇಹವನ್ನು ಸುಟ್ಟುಹಾಕುತ್ತಾರೆ. ಆದರೆ ಆತ್ಮನಾದ ನೀನು ಇರುತ್ತೀಯಾ ಆ ಜೀವನವು ಕಾಣಿಸದು. ಆದರೆ ಹಾಗೆ ಕಣ್ಣಿಗೆ ಕಾಣಿಸದ ಜೀವನ ಇರುವುದೆಂದು ತಿಳಿದುಕೊಳ್ಳುವುದೇ ಜ್ಞಾನ.

ಕಾಣಿಸದ ಜೀವನವನ್ನು ಕುರಿತು ಬದುಕಿರುವಾಗ ತಿಳಿಯದು. ಕಣ್ಣಿಗೆ ಕಾಣಿಸದವರೆಲ್ಲಾ ಕಣ್ಣಿಗೆ ಕಾಣಿಸದ ಲೋಕಗಳಲ್ಲಿ ಇರುತ್ತಾರೆ.

**ಸೂಕ್ಷ್ಮಲೋಕಗಳು ಕಾಣಿಸುವುದಿಲ್ಲ, ಲೋಕಗಳಲ್ಲಿ ಇರುವವರು ಕಾಣಿಸರು, ಹಾಗೇ ಕಣ್ಣಿಗೆ ಕಾಣಿಸದವುಗಳ ಕುರಿತು ತಿಳಿದುಕೊಂಡವನೇ ಜ್ಞಾನಿ.**

ಸೃಷ್ಟಿಯಲ್ಲಿ ಕಾಣಿಸದ ಲೋಕಗಳು ಇವೆ. ಏಳು ಊರ್ಧ್ವ ಲೋಕಗಳು, ಏಳು ಅಧೋಲೋಕಗಳು.

ಸೃಷ್ಟಿಯಲ್ಲಿ ಕಾಣಿಸುವ ಲೋಕಗಳು ನೀರಿನ ಹನಿಯಂತೆ ಆದರೆ, ಕಾಣಿಸದ ಲೋಕಗಳು ಸಮುದ್ರದಷ್ಟು ಇವೆ.

ಕಾಣಿಸುವ ಲೋಕಗಳು ಸೂರ್ಯ, ಚಂದ್ರ, ನಕ್ಷತ್ರಗಳು, ನವಗ್ರಹಗಳು ಇನ್ನೂ ತಿಳಿಯದ ಎಷ್ಟೋ ಲೋಕಗಳು ಇವೆ. ಲಕ್ಷಗಳಷ್ಟು ಭೂಮಂಡಲಗಳಿವೆಯೆಂದು ಪತ್ರೀಜಿಯವರು ಹೇಳಿದ್ದಾರೆ. ಅದರಲ್ಲಿ ಯಾವುದು ಶ್ರೇಷ್ಠವಾದದ್ದು ಎಂದು ಕೇಳಿದರೆ,

ಅದರ ಶ್ರೇಷ್ಠತೆ ಅದರದ್ದೇ, ಯಾವುದರ ವಿಶಿಷ್ಟತೆ ಅದರದ್ದೇ ಎಂದರು. ಹಾಗೆ ಎಷ್ಟೋ ಸೂರ್ಯರು, ಎಷ್ಟೋ ಚಂದ್ರರು ಇದ್ದಾರೆ. ಜ್ಞಾನವು ವೃದ್ಧಿಸಿದರೆ ಸೃಷ್ಟಿಯೊಂದರ ಶ್ರೇಷ್ಠತನವು ಅರ್ಥವಾಗುತ್ತದೆ, ಆಶ್ಚರ್ಯವುಂಟಾಗುತ್ತದೆ.

ಸೃಷ್ಟಿಯ ಶ್ರೇಷ್ಠತೆಯನ್ನು ಕುರಿತು ನನ್ನ ಚಿಕ್ಕ ವಯಸ್ಸಿನಲ್ಲಿ ಒಬ್ಬ ಪಂಡಿತರು ಹೇಳಿದ ಪುರಾಣಕಥೆಯನ್ನು ತಿಳಿದುಕೊಳ್ಳೋಣ.

ಸೃಷ್ಟಿಯಲ್ಲಿ ಎಲ್ಲರಿಗಿಂತಲೂ ಶ್ರೇಷ್ಠನಾದವನು ಪರಬ್ರಹ್ಮ, ಆತನನ್ನೇ ಸೃಷ್ಟಿಕರ್ತ ಎನ್ನುತ್ತಾರೆ. ಆತನಿಂದಲೇ ಸೃಷ್ಟಿಸಲ್ಪಟ್ಟ ಬ್ರಹ್ಮ, ವಿಷ್ಣು, ಮಹೇಶ್ವರರಲ್ಲಿ ಸ್ವಲ್ಪ ಅಹಂಕಾರವು ಪ್ರವೇಶಿಸಿತಂತೆ.

ಈ ಸೃಷ್ಟಿ ಮಾಡುತ್ತಿರುವುದು ನಾವೇ, ನಡೆಸುತ್ತಿರುವುದೂ ನಾವೇ. ಲಯ ಮಾಡುವುದು ನಾವೇ ಎಂಬ ಅಹಂಕಾರವು ಮನೆ ಮಾಡಿಕೊಂಡಿತಂತೆ. ಪರಬ್ರಹ್ಮ ಅವರಿಗೆ ಬುದ್ಧಿ ಹೇಳಬೇಕೆಂದು ಅವರನ್ನು ನನ್ನೊಂದಿಗೆ ಬನ್ನಿ ಎಂದು, ಮೂವರನ್ನು ಕಣ್ಣುಮುಚ್ಚಿರೆಂದು ಹೇಳಿ ಕೋಟ್ಯಾನು ಕೋಟಿ ಮೈಲಿ ದೂರದವರೆಗೆ ಇವರನ್ನು ಕರೆದುಕೊಂಡು ಹೋದರಂತೆ.

ಒ ದು ಕಡೆ ಪರಬ್ರಹ್ಮನು ಅವರನ್ನು ಕಣ್ಣು ತೆರೆಯಿರಿ ಎಂದರು. ಅವರು ಕಣ್ಣು ತೆರೆದು ನೋಡಿದರೆ ಅಲ್ಲಿ ಬ್ರಹ್ಮನೂ ಸರಸ್ವತಿ ಇದ್ದಾರಂತೆ. ಆಗ ಬ್ರಹ್ಮನು ಆಶ್ಚರ್ಯಪಟ್ಟನಂತೆ. ಇನ್ನೊಬ್ಬ ಬ್ರಹ್ಮನೂ ಕೂಡಾ ಇದ್ದಾನಾ? ಎಂದು. ಅಲ್ಲಿಯವರೆಗೆ ನಾನೇ ಬ್ರಹ್ಮನು, ಸೃಷ್ಟಿ ಮಾಡುವುದು ನಾನೇ ಎಂದು ಅಂದುಕೊಂಡನಂತೆ. ಈಗ ಇನ್ನೊಬ್ಬ ಬ್ರಹ್ಮ ಕಾಣಿಸಿದರೆ ಆತನು ಆಶ್ಚರ್ಯಪಡುವುದೇ ಅಲ್ಲದೆ, ಆತನಲ್ಲಿಯ ಅಹಂಕಾರವು ಇಳಿದು ಹೋಯಿತಂತೆ.

ನಂತರ ಪರಬ್ರಹ್ಮನು ಅವರನ್ನು ಮತ್ತೆ ಕಣ್ಣು ಮುಚ್ಚಿರಿ ಎಂದರಂತೆ. ಕೋಟ್ಯಾನು ಕೋಟಿ ಮೈಲಿಗಳು ಪ್ರಯಾಣಿಸಿದ ನಂತರ ಮತ್ತೆ ಕಣ್ಣು ತೆರೆಯಿರಿ ಎಂದರಂತೆ. ಆಶ್ಚರ್ಯ ಅಲ್ಲಿ ಇನ್ನೊಂದು ವೈಕುಂಠ ಇರುವುದೇ ಅಲ್ಲ, ಅಲ್ಲಿ ವಿಷ್ಣುವು ಲಕ್ಷ್ಮಿದೇವಿ ಕೂಡಾ ಇದ್ದಾರಂತೆ. ಅವರ ಆಶ್ಚರ್ಯಕ್ಕೆ ಅಂತ್ಯವಿಲ್ಲವಂತೆ. ಮತ್ತೆ ಕಣ್ಣು ಮುಚ್ಚಿಕೊಳ್ಳಿ ಎಂದು ಹೇಳಿ ಇನ್ನೂ ಕೆಲವು ಮೈಲಿಗಳು ಪ್ರಯಾಣಿಸಿದ ನಂತರ ಮತ್ತೆ ಕಣ್ಣು ತೆರೆಯಿರಿ ಎಂದು ಪರಬ್ರಹ್ಮ ಹೇಳಿದಾಗ ಅವರು ಕಣ್ಣು ತೆರೆದರಂತೆ. ಮತ್ತೆ ಆಶ್ಚರ್ಯ. ಅಲ್ಲಿ ಮತ್ತೊಂದು ಕೈಲಾಸ ಇರುವುದೇ ಅಲ್ಲದೆ, ಅಲ್ಲಿ ಶಿವನು ಪಾರ್ವತಿ ಕೂಡಾ ಇದ್ದಾರಂತೆ.

ಆಗ ಪರಬ್ರಹ್ಮನು ಅವರೊಂದಿಗೆ, ನೀವೆ ಸಮಸ್ತವು ಎಂದು ಬಿರ್ರನೆ ಬೀಗುತ್ತಿದ್ದೀರಿ. ಆದರೆ ಈ ಸೃಷ್ಟಿಯಲ್ಲಿ ನಿಮ್ಮಂತಹವರು ಎಷ್ಟೋ ಮಂದಿ ಇದ್ದಾರೆ ಎಂದು

ಹೇಳಿದರಂತೆ.

ಆದ್ದರಿಂದ ಸೃಷ್ಟಿ ಅನಂತವಾದದ್ದು. ಅದು ಅಂತ್ಯವಿಲ್ಲದ್ದು ಎಂದು ತಿಳಿದುಕೊಳ್ಳಬೇಕು. ಆದ್ದರಿಂದ ಇನ್ನೂ ತಿಳಿದುಕೊಳ್ಳಬೇಕಾದದ್ದು ಏನೆಂದರೆ ಸೃಷ್ಟಿ ಮಾಡಿದ ಸೃಷ್ಟಿಕರ್ತನು ಇದ್ದಾನೆ, ಕಾಣಸುವುದು. ಅಷ್ಟೇ ಅಲ್ಲ ಸೃಷ್ಟಿಕರ್ತ ಮಾಡಿದ ಧರ್ಮಗಳಿವೆ, ಆತನು ಏರ್ಪಾಟು ಮಾಡಿದ ಸಿದ್ಧಾಂತಗಳಿವೆ ಎಂದು ತಿಳಿದುಕೊಳ್ಳಬೇಕು. ಅವುಗಳನ್ನೇ ಸೃಷ್ಟಿಕರ್ತ ಮಾಡಿದ ಸಂವಿಧಾನ ಎಂದೂ ಕುಡಾ ಹೇಳಿಕೊಳ್ಳಬಹುದು ಆದರೆ ಕಾಣಿಸವು, ಆದರೆ ಅವುಗಳ ಕುರಿತು ತಿಳಿದುಕೊಳ್ಳುವುದೇ ಜ್ಞಾನ.

ಯಾವುದು ಏನಾದರೂ ಮಾನವನು ಮಾಡುವ ಹಿಂಸೆಯಿಂದ ಕಷ್ಟಗಳು ಬರುತ್ತವೆ. ಕಷ್ಟಗಳು ಬರಬಾರದು ಅಂದರೆ ಹಿಂಸೆ ಮಾಡದಂತೆ ಅಹಿಂಸಾ ಮಾರ್ಗದಲ್ಲಿ ಪಯಣಿಸಬೇಕು.

3. ಮಹಾತ್ಮರು ಏನು ಹೇಳಿದ್ದಾರೆಂದರೆ? **"ಯಾರಿಂದಲೂ ಏನನ್ನು ಆಶಿಸಬಾರದು, ಎಲ್ಲರಿಗೂ ಸೇವೆ ಮಾಡಬೇಕು, ಸಹಕಾರವನ್ನು ಕೊಡಬೇಕು" ಎಂದಿದ್ದಾರೆ.**

**'ಆಸೆ'** ಎಂಬುದು ಪೆಡಂಭೂತ, ಯಾರನ್ನಾದರೂ ನುಂಗಿಬಿಡುತ್ತದೆ ಅದಕ್ಕೆ ಷಿರಡಿ ಬಾಬಾ ಈಶಾವಾಶ್ಯೋಪನಿಷತ್‌ನಲ್ಲಿ ಹೀಗೆ ಹೇಳಿದ್ದಾರೆ.

**ಶ್ಲೋಕ ॥ ಈಶಾವಾಶ್ಯ ಮಿಧಂ ಸತ್ಯಂ, ಯತ್ಕಿಂಚ ಜಗಿತ್ಯಾಂ ಜಗತ್**

**ತೇನ ತ್ಯಕ್ತೇನ ಭುಂಜಿಥಾಂ ಮಾಗೃಥಂ ಕಶ್ಯ ಸಿಧ್ಧಿನಂ.**

ತಾತ್ಪರ್ಯ : ಈ ಸೃಷ್ಟಿ ಎಲ್ಲವು ಜಡ ಚೈತನ್ಯ ಅಂದರೆ ಚಲನೆ ಇರುವ, ಚಲನೆ ಇಲ್ಲದ ರೂಪಗಳೆಲ್ಲವು ಆ ಪರಬ್ರಹ್ಮನಿಂದಲೇ ವ್ಯಾಪಿಸಲ್ಪಟ್ಟಿವೆ. ಆದ್ದರಿಂದ ಯಾವುದು ಇದ್ದರೂ, ಯಾವುದು ಲಭಿಸಿದರೂ ಅದು ಈಶ್ವರನದೇ ಎಂದು ತಿಳಿದುಕೊಳ್ಳಬೇಕು. ಆದ್ದರಿಂದ ಈಶ್ವರನಿಂದ ಲಭಿಸಿದ ಐಶ್ವರ್ಯವನ್ನು ತ್ಯಾಗಪೂರ್ವಕವಾಗಿ ಅನುಭವಿಸಬೇಕು. ಯಾವ ರೀತಿಯಾದ ಲೋಭವನ್ನು, ಮೋಹವನ್ನು ಇಟ್ಟುಕೊಳ್ಳಬಾರದು, ಯಾರದನ್ನು ಆಶಿಸಬಾರದು, ಅಪಹರಿಸಬಾರದು ಎಂದು ಷಿರಡಿ ಬಾಬಾ ಹೇಳಿದ್ದಾರೆ.

ದೊಡ್ಡ ದೊಡ್ಡ ಮಹಾ ಯೋಗಿಗಳೆಲ್ಲಾ ಇದನ್ನೇ ಬೋಧಿಸಿದ್ದಾರೆ. ವಿರುದ್ಧವಾಗಿ ವರ್ತಿಸಿದರೆ ಜೀವನದಲ್ಲಿ ವಿರುದ್ಧವಾದ ಫಲಗಳಿರುತ್ತವೆ. ಲೋಕದಲ್ಲಿ ನನ್ನದು, ನನ್ನದು ಎನ್ನುತ್ತಾರೆ, ಅಸಲು ನನ್ನದೆನ್ನುವುದು ಎಲ್ಲಿದೆ? ನನ್ನದೆನ್ನುವುದು ಯಾವುದೂ ಇಲ್ಲ, ಎಲ್ಲಾ ಆತನದೇ! ಆ ಪರಬ್ರಹ್ಮನದೇ! ಎಲ್ಲರು ಕೆಲವು ಅನುಭವಗಳಿಗಾಗಿ, ಪಾಠಗಳನ್ನು ಕಲಿತುಕೊಳ್ಳುವುದಕ್ಕೆ ಈ ಭೂಮಿಯ ಮೇಲೆ ಬಂದಿದ್ದಾರೆ. ಆದ್ದರಿಂದ ಅದಕ್ಕೂ ಮೊದಲು ನೀವು ಹೊಂದಿದ ಅರ್ಹತೆಗೆ ಅನುಗುಣವಾಗಿ ಹೊಂದಬೇಕಾದದ್ದನ್ನು ಹೊಂದುತ್ತೀರಿ.

ಅದಕ್ಕೆ ಕೆಲವು ಜನರ ಬಳಿ ಲಕ್ಷಗಳು, ಕೋಟಿಗಳು ಇವೆ, ಕೆಲವರ ಬಳಿ ಸಾವಿರಗಳಿವೆ, ಕೆಲವರ ಬಳಿ ಏನೂ ಇಲ್ಲ.

ಯಾವುದು ಏನಾದರೂ, ಯಾವುದು ಇಲ್ಲದಿದ್ದರೂ, ಯಾವುದು ನಿನ್ನದಲ್ಲ ಎಂದು ತಿಳಿದುಕೊಳ್ಳಬೇಕು. ಭೂಮಿಯ ಮೇಲೆ ಬರುವಾಗ ನೀವು ಏನೂ ತೆಗೆದುಕೊಂಡು ಬಂದಿಲ್ಲ, ಏನು ತೆಗೆದುಕೊಂಡು ಬಾರದ ನೀವು ಹೇಗೆ ತೆಗೆದುಕೊಂಡು ಹೋಗುತ್ತೀರಿ? ಹೋಗಬೇಕಾದ ಸಮಯ ಬಂದಾಗ ಎಲ್ಲಾ ಬಿಟ್ಟು ಹೋಗಿಬಿಡುತ್ತೀರಿ, ಮರು ಮಾತನಾಡದೇ ಹೋಗಿಬಿಡುತ್ತೀರಿ. ನನ್ನದು, ನನ್ನದು ಎಂದು ಹೇಳುತ್ತೀರಿ. ಆದರೆ ನಾನು ಎನ್ನುವುದು ಎಲ್ಲಿದೆ? ನೀವು ಪಾಠಗಳನ್ನು ಕಲಿತುಕೊಳ್ಳುವುದಕ್ಕೆ, ಅನುಭವಗಳನ್ನು ಹೊಂದುವುದಕ್ಕೆ ಮಾತ್ರ ಬಂದಿದ್ದೀರಿ.

ನೋಡಿರಿ, ರೈಲು ಪ್ರಯಾಣದಲ್ಲಿ ಅವರ ಸ್ಥಿತಿಗೆ ತಕ್ಕಂತೆ ಅವರು ರೈಲಿನಲ್ಲಿ ಬೆರ್ತಗಳನ್ನು ಮುಂಗಡವಾಗಿ ಕಾಯ್ದಿರಿಸಿಕೊಳ್ಳುತ್ತಾರೆ. ಫಸ್ಟ್ ಎ.ಸಿ., ಸೆಕೆಂಡ್ ಎ.ಸಿ., ಸ್ಲೀಪರ್, ಜನರಲ್, ಹೀಗೆ ಅವರ ಸ್ಥಿತಿಗೆ ಅನುಗುಣವಾಗಿ ಅವರು ಬೆರ್ತನ್ನು ರಿಜರ್ವ್ ಮಾಡಿಕೊಳ್ಳುತ್ತಾರೆ. ಹಾಗೆಯೇ ಭೂಮಿಯ ಮೇಲೆ ನಿಮ್ಮ ಅರ್ಹತೆಯನ್ನು ಆಧರಿಸಿ ನಿಮ್ಮ ಆರ್ಥಿಕ ಸ್ಥಿತಿ ಇದೆ.

ರೈಲು ಟಿಕೆಟ್ ಕೆಲವು ಗಂಟೆಗಳು ಪ್ರಯಾಣಕ್ಕಾಗಿ ಬುಕ್ ಮಾಡಿಕೊಳ್ಳುತ್ತಾ ಪ್ರಯಾಣ ಮಾಡಿದಷ್ಟು ಹೊತ್ತು ನನ್ನದು, ನನ್ನದು ಅನ್ನುತ್ತೀರಿ. ಪ್ರಯಾಣ ಮುಗಿದ ಮೇಲೆ ಇಳಿದು ಹೋಗುತ್ತೀರಿ.

ಈ ಜ್ಞಾನವಿಲ್ಲದವನು ನನ್ನದು, ನನ್ನದು ಎಂದು ಹಾರಾಡುತ್ತಾನೆ. ತಿಳಿದವನು ತಿಳಿಯದವನ ಮೇಲೆ ಅನುಕಂಪ ತೋರಿಸುತ್ತಾನೆ. ಗಮನಿಸಿ ರೈಲು ಪ್ರಯಾಣದಲ್ಲಿ

ಎಷ್ಟೋ ಜನ ಪರಿಚಯವಾಗುತ್ತಾ ಇರುತ್ತಾರೆ. ಆದರೆ ಗುರಿ ಮುಟ್ಟಿದ ಮೇಲೆ ಯಾರೂ ನಿನ್ನ ಹಿಂದೆ ಬರುವುದಿಲ್ಲ. ಹಾಗೇ ಜೀವನ ಪ್ರಯಾಣದಲ್ಲಿ ಕೂಡಾ ಯಾರು ಶಾಶ್ವತವಾಗಿ ಇರುವುದಿಲ್ಲ, ಹಿಂದೆ ಬರಲಾರರು.

ಜೀವನ ಪ್ರಯಾಣದಲ್ಲಿ ಗಂಡ, ಹೆಂಡತಿ ಪರಿಚಯವಾಗುತ್ತಾರೆ. ರೈಲಿನಲ್ಲಿ ಸ್ವಲ್ಪ ದೂರ ಪ್ರಯಾಣಿಸಿದ ಮೇಲೆ ಜೊತೆಗಿರುವವರು ಹೇಗೆ ಇಳಿದುಹೋಗುತ್ತಾರೋ ಜೀವನ ಪ್ರಯಾಣದಲ್ಲಿ ಗಂಡ–ಹೆಂಡತಿ ಕೂಡಾ ಮಧ್ಯದಲ್ಲಿ ದೂರಾಗುತ್ತಾರೆ. ಆದ್ದರಿಂದ ನನ್ನದು, ನನ್ನದು ಎಂದು ಆಸೆ ಪಡುವುದು ಏಕೆ? ಪಾಪಗಳನ್ನು ತಪ್ಪುಗಳನ್ನು ಮಾಡುವುದು ಏಕೆ? ಅಷ್ಟೇ ಅಲ್ಲ ಯಾರಿಗಾಗಿ ಅಪರಾಧಗಳನ್ನು, ಘೋರಗಳನ್ನು ಮಾಡಿದರೂ ನೀನು ನಿಷ್ಕ್ರಮಿಸಿದಾಗ ನೀನು ಮಾಡಿದ ತಪ್ಪುಗಳು, ಪಾಪಗಳು ಮಾತ್ರ ನಿನ್ನ ಹಿಂದೆ ಬರುತ್ತವೆ.

ಆದ್ದರಿಂದ ಯಾವುದು ಇರಲಿ! ಯಾರು ದೊರಕಿದರೂ! ಅದು ಈಶ್ವರನದೇ ಎಂದು ತಿಳಿದುಕೊ!

ಹುಟ್ಟಿದಾಗಲೇ ಕೆಲವು ಇರುತ್ತವೆ. ನಂತರ ಕೆಲವು ಅರ್ಹತೆಯನ್ನು ಆಧರಿಸಿ ಲಭಿಸುತ್ತದೆ. ಪದವಿಗಳು, ಉದ್ಯೋಗಗಳು, ಸಂಪತ್ತುಗಳು ಯಾವಾಗಲಿ ಅರ್ಹತೆಯನ್ನಾಧರಿಸಿ ಲಭಿಸುತ್ತದೆ. ಆದರೆ ಹಾಗೆ ಭಗವಂತನಿಂದ ಹೊಂದಿದ್ದವುಗಳನ್ನು ತ್ಯಾಗಪೂರ್ವಕವಾಗಿ ಅನುಭವಿಸಬೇಕು ಎಂದು ಷಿರಿಡಿ ಬಾಬಾ ಹೇಳಿದ್ದಾರೆ.

ಅದಕ್ಕೆ "ಧರ್ಮದಿಂದ ಸಂಪಾದಿಸಿದ್ದರಲ್ಲಿ ಸ್ವಲ್ಪ ನಾವು ತಿಂದು, ಸ್ವಲ್ಪ ಇತರರಿಗೆ ಹಂಚಬೇಕು" ಅದೇ ತ್ಯಾಗಪೂರ್ವಕವಾಗಿ ಅನುಭವಿಸುವುದ ಅಂದರೆ! ಪತ್ರೀಜಿಯವರು ಪರಿಚಯ ಆಗದೇ ಇರುವವರೆಗೆ ನನಗೆ ಏನು ತಿಳಿಯದು, ಪರಿಚಯ ಆದ ನಂತರ ಬಹಳ ತಿಳಿದುಕೊಂಡೆನು.

ಆದ್ದರಿಂದ ನೀನು ಭಗವಂತನಿಂದ ಹೊಂದಿದ್ದರಲ್ಲಿ ಸ್ವಲ್ಪ ಲೋಕಕಲ್ಯಾಣಕ್ಕೆ ಬಳಸು. ಲೋಕಕಲ್ಯಾಣಕ್ಕಾಗಿ ಎಷ್ಟು ಖರ್ಚು ಮಾಡುವಿರೋ! ಅದೇ ತ್ಯಾಗಪೂರ್ವಕವಾಗಿ ಅನುಭವಿಸುವುದು ಅಂದರೆ! ಇತರರ ಒಳಿತಿಗಾಗಿ ಖರ್ಚು ಮಾಡುವುದರಲ್ಲಿ ಲೋಭವನ್ನು ತೋರಿಸಬೇಡ. ಕೊಡಬೇಕಾದದ್ದನ್ನು ಕೊಡದಿದ್ದರೆ ಹೊಂದಬೇಕಾದ್ದನ್ನು ಹೊಂದಲಾರೆ.

ನನ್ನದು ಕೊಡುತ್ತಿದ್ದೇನೆ, ನನ್ನದು ಕೊಡುತ್ತಿದ್ದೇನೆ ಎಂದುಕೊಳ್ಳುತ್ತಿರುವೆ. ಆದರೆ ಕೊಡುವುದಕ್ಕೆ ನಿನ್ನದು ಅನ್ನುವುದು ಯಾವುದೂ ಇಲ್ಲ, ಎಲ್ಲಾ ಈಶ್ವರನದೇ! ಈಶ್ವರನಿಂದ ಬಂದದ್ದೇ ನೀನು ಹಂಚುತ್ತಿರುವೆ. ಹಂಚಿದ್ದು ಹೆಚ್ಚಿಸಲ್ಪಡುತ್ತದೆ ಎಂದು ಪತ್ರೀಜಿಯವರು ಹೇಳಿದ್ದಾರೆ. ನಮ್ಮದು ಅಲ್ಲದ್ದನ್ನು ಹಂಚದಿರುವುದೇ ಲೋಭ, ಪಿಸಿನಾರಿತನವೆನ್ನುತ್ತಾರೆ. ಕಾರಣ ಹಂಚುವುದು ಕಷ್ಟ, ಬಚ್ಚಿಟ್ಟುಕೊಳ್ಳುವುದು ಇಷ್ಟವಾದ್ದರಿಂದ, ಏನಾಗಲಿ ಅರ್ಹತೆ ಎನ್ನುವುದು ಕೊಟ್ಟರೆ ಬರುತ್ತದೆ, ಕೊಡದಿದ್ದರೆ ಬಾರದು. ಇವೆಲ್ಲಾ ತಿಳಿದೇ ಷಿರಿಡಿ ಬಾಬಾರವರು ಭಿಕ್ಷಾಟನೆ ಮಾಡಿ ಬದುಕುತ್ತಿದ್ದರು.

ಆದರೆ ಅಜ್ಞಾನಿಗಳು ಬಾಬಾನಿಂದ ಐಶ್ವರ್ಯವನ್ನು ಹೊಂದಬಹುದೆಂದು ಆರತಿಗಳನ್ನು ಕೊಡುತ್ತಾರೆ. ಹಾಗಾದರೆ ಬಾಬಾ ಐಶ್ವರ್ಯವನ್ನು ಕೊಡುವಂತಿದ್ದರೆ ಆತನೆ ದೊಡ್ಡ ಬಂಗಲೆ ಕಟ್ಟಿಕೊಂಡು ಹಾಯಾಗಿ ಇರಬಹುದಲ್ಲ? ಏಕೆ ಭಿಕ್ಷಾಟನೆ ಮಾಡಿದರು? ಅಂದರೆ ಐಶ್ವರ್ಯದಲ್ಲಿ ಏನು ಇಲ್ಲವೆಂದಲ್ಲವೇ? ಆದ್ದರಿಂದ ಏನು ಮಾಡದವನಿಗೆ ಏನು ಬಾರದು ಎಂದು ತಿಳಿದುಕೊಳ್ಳಿ. ಇರುವುದರಲ್ಲಿಯೇ ಹಂಚಿದರೆ ಮರುಜನ್ಮದಲ್ಲಿ ಹೊಂದುವ ಅರ್ಹತೆಯನ್ನು ಹೊಂದುತ್ತೀರಿ.

ಈ ಸೃಷ್ಟಿಯಲ್ಲಿ ಯಾವುದೂ ಶಾಶ್ವತವಲ್ಲ, ಸೃಷ್ಟಿಯಲ್ಲಿ ಬದಲಾವಣೆ ಎನ್ನುವುದು ಸಹಜ. ಈಗ ಮಾಡಿಕೊಂಡದ್ದನ್ನು ಆಧರಿಸಿಯೇ ಭವಿಷ್ಯತ್ ಜೀವನ ಆಧಾರಪಟ್ಟಿರುತ್ತದೆ, ಕೊಡದಿದ್ದರೆ ಏನೂ ಬರುವುದಿಲ್ಲ ತಿಳಿದುಕೊಳ್ಳಿ. ಅಷ್ಟೇ ಅಲ್ಲ ನಮ್ಮದು ಅಲ್ಲದ್ದನ್ನು ಹೇಳದಂತೆ ತೆಗದುಕೊಂಡರೂ ಅಪಹರಿಸಿದಂತೆಯೇ! ನಮ್ಮದು ಅಲ್ಲದ್ದನ್ನು ಆಶಿಸಬಾರದು, ತೆಗೆದುಕೊಳ್ಳಬಾರದು! ಇರುವುದಲ್ಲಿಯೇ ಸಾಧ್ಯವಾದಷ್ಟು ಹಂಚಬೇಕು, ಎಲ್ಲರಿಗೂ ಸೇವೆ ಮಾಡಬೇಕು, ಸಹಕಾರವನ್ನು ಕೊಡಬೇಕು, ಆಗಲೇ ತ್ಯಾಗಪೂರ್ವಕವಾಗಿ ಜೀವಸಿದಂತೆ.

"ಎಲ್ಲಕ್ಕಿಂತ ಉತ್ತಮವಾದ ಸೇವೆ ಅತ್ಯುತ್ತಮ ಸೇವೆ ಜ್ಞಾನ ಸೇವೆ" ತಿಳಿದುಕೊಳ್ಳಿ.

ಧನವು ಅಶಾಶ್ವತ – ಜ್ಞಾನವು ಶಾಶ್ವತ

ಧನವು ಹಿಂದೆ ಬರುವುದಿಲ್ಲ – ಜ್ಞಾನವು ಹಿಂದೆ ಬರುತ್ತದೆ

ಧನವು ದುಃಖವನ್ನು ಹೆಚ್ಚಿಸುತ್ತದೆ – ಜ್ಞಾನವು ದುಃಖವನ್ನು ತಗ್ಗಿಸುತ್ತದೆ

ಧನವೆನ್ನುವುದು ಇಹದಲ್ಲಿ ಸ್ವಲ್ಪ ಮಟ್ಟಿಗೆ ಉಪಯೋಗವಾಗುತ್ತದೆ, ಆದರೆ ಜ್ಞಾನವು

ಇಹಪರಗಳಲ್ಲಿ ಲಾಭವನ್ನು ತಂದುಕೊಡುತ್ತದೆ. ಎಷ್ಟು ಹಣವಿದ್ದರೂ ಊರ್ಧ್ವ ಲೋಕವನ್ನು ಸೇರಿಕೊಳ್ಳಲಾರಿರಿ, ಆದರೆ ಜ್ಞಾನವಿದ್ದರೆ ಊರ್ಧ್ವ ಲೋಕಗಳನ್ನು ಸೇರಿಕೊಳ್ಳುತ್ತೀರಿ.

ಇಲ್ಲಿ ಎಷ್ಟು ಧನವಿದ್ದರೂ ಅವರು ಮಾಡುವ ಕರ್ಮಗಳನ್ನು ಆಧರಿಸಿಯೇ ಅವರು ಹೊಂದುವ ಲೋಕಗಳು ಆಧಾರವಾಗಿರುತ್ತದೆ. ಜ್ಞಾನವಿದ್ದವನು ಊರ್ಧ್ವ ಲೋಕಗಳನ್ನು ಸೇರಿಕೊಳ್ಳುವುದೇ ಅಲ್ಲ, ಅಲ್ಲಿ ದೊಡ್ಡ ದೊಡ್ಡ ಜ್ಞಾನಿಗಳು, ಋಷಿಗಳು, ಮಹರ್ಷಿಗಳು, ಯೋಗಿಗಳ ಸಾಂಗತ್ಯವನ್ನು ಹೊಂದುತ್ತೀರಿ.

ಧನವಿದ್ದವನಿಗೆ ಕರ್ಮಗಳನ್ನಾಧರಿಸಿಯೇ ಮರುಜನ್ಮವಿರುತ್ತದೆ. ಜ್ಞಾನವಿದ್ದವರಿಗೆ ಅವರು ಕೋರಿಕೊಂಡಂತೆ ಮರುಜನ್ಮ ಬರುತ್ತದೆ. ಆದ್ದರಿಂದ ಜ್ಞಾನವನ್ನು ಸಂಪಾದಿಸಿದರೆ ಎಲ್ಲಾ ಲಾಭಗಳೇ.

4. ಮಹಾತ್ಮರು ಇನ್ನು ಏನು ಹೇಳಿದ್ದಾರೆಂದರೆ **"ಈ ಲೋಕದ ವಸ್ತುಗಳ ಮೇಲೆ ವ್ಯಾಮೋಹವು ನಮ್ಮನ್ನು ಪದೇ ಪದೇ ಈ ಅಧೋ ಲೋಕಗಳಿಗೆ ತಂದು ಸಾವು ಹುಟ್ಟುಗಳ ವಿಷ ಚಕ್ರದಲ್ಲಿಬಂಧಿಸುತ್ತದೆ."**

ಭೂಮಿಯನ್ನು ಅಧೋ ಲೋಕವೆಂದು ಏಕೆ ಅಂದಿದ್ದಾರೆ? ಅಂದರೆ ಅಧೋ ಲೋಕದ ಮೇಲೆ 6 ಸೂಕ್ಷ್ಮ ಲೋಕಗಳಿವೆ.

1. ಭುರ್ವಲೋಕ 2. ಸುರ್ವಲೋಕ 3. ಜನಾಲೋಕ 4. ಮಹಾಲೋಕ 5. ತಪೋಲೋಕ 6. ಸತ್ಯಲೋಕ

ಈ ಭೂಲೋಕ ವಸ್ತುಗಳ ಮೇಲೆ ವ್ಯಾಮೋಹವು ಇರುವುದರಿಂದ ಈ ಅಧೋಲೋಕಕ್ಕೆ ಪದೇ ಪದೇ ಬರುತ್ತಿದ್ದೇವೆ. ಈ ಲೋಕದಲ್ಲಿ ಗಂಡ, ಹೆಂಡತಿ. ಮಕ್ಕಳು, ಮೊಮ್ಮಕ್ಕಳು, ಹಣ, ಸಂಪತ್ತುಗಳು, ಸುಖಗಳು ಗೊಂಚಲು ಗೊಂಚಲುಗಳಾಗಿವೆ.

ಮಾನವನು ಪಂಚ ಜ್ಞಾನೇಂದ್ರಿಯಗಳಿಂದ ಅನುಭವಿಸುವವುಗಳ ಮೇಲೆ ವ್ಯಾಮೋಹದಿಂದ ತಿನ್ನುವ ವಸ್ತುಗಳು, ಕಣ್ಣಿನಿಂದ ನೋಡಬಲ್ಲ ಸುಂದರ ದೃಶ್ಯಗಳು, ಕೇಳಬಲ್ಲ ಕಿವಿಗಳಿಗೆ ಸಂಗೀತ, ಸುವಾಸನೆಗಳು, ಸ್ಪರ್ಶ ಸುಖ, ಇವುಗಳೆಲ್ಲವುಗಳಿಂದ ಇದ್ದವುಗಳಿಂದ ತೃಪ್ತಿ ಇರದು. ವ್ಯಾಮೋಹವನ್ನು ನೆರವೇರಿಸಿಕೊಳ್ಳಬೇಕೆಂದರೆ

ಹಣವಿರಬೇಕು. ತನ್ನ ಬಳಿ ಇರುವ ಹಣ ಸರಿಹೋಗದೆ ಇದ್ದರೆ ತಪ್ಪುಗಳನ್ನು ಪಾಪಗಳನ್ನು ಮಾಡುತ್ತಾರೆ. ತಪ್ಪುಗಳು ಪಾಪಗಳು ಮಾಡುವುದರಿಂದ ಮತ್ತೆ ಮತ್ತೆ ಭೂಮಿಯ ಮೇಲೆ ಬರಬೇಕಾಗುತ್ತದೆ.

ಭೂಮಿಯ ಮೇಲೆ ಬಂದು ಮಾಡಬೇಕಾದದ್ದು ಏನೆಂದರೆ? ಭೂಮಿ ಮೇಲೆ ಬರದಂತೆ ಇರುವ ಪ್ರಯತ್ನವನ್ನು ಮಾಡಬೇಕು. ಆ ಪ್ರಯತ್ನವನ್ನು ಮಾಡಿದಿದ್ದರೆ, ಈ ಲೋಕ ವಸ್ತುಗಳ ಮೇಲೆ ವ್ಯಾಮೋಹದಿಂದ ಹುಟ್ಟು ಸಾವುಗಳ ವಿಷಚಕ್ರದಲ್ಲಿ ಬಂಧಿಯಾಗಿಬಿಡುತ್ತಾರೆ. ಇಲ್ಲದಿದ್ದರೆ ಈ ವಸ್ತುಗಳ ಮೇಲೆ ಎಷ್ಟು ವ್ಯಾಮೋಹವಿದ್ದರೆ ಅಷ್ಟು ಹೆಚ್ಚು ಜನ್ಮಗಳು ಹೆಚ್ಚುತ್ತವೆ.

ಈ ಲೋಕದ ವಸ್ತುಗಳ ಮೇಲೆ ವ್ಯಾಮೋಹವಿಲ್ಲದಿದ್ದರೆ ಜನ್ಮಗಳು ಕಡಿಮೆ ಆಗುತ್ತವೆ.

ಜಂತುಗಳಲ್ಲಿ ಯಾವ ಜಂತುವನ್ನು ನೋಡಿದರೂ ಅವುಗಳಿಗೆ ಇರುವ ಒಂದು ಇಂದ್ರಿಯದ ಬಲಹೀನತೆಯಿಂದಲೇ ನಾಶವಾದವು. ಆದರೆ ಮಾನವನಿಗೆ 5 ಜ್ಞಾನೇಂದ್ರಿಗಳ ಬಲಹೀನತೆ ಇದೆ. ಅವುಗಳಿಂದ ಎಷ್ಟು ಪತನವಾಗುತ್ತಾನೋ ಆಲೋಚಿಸಿರಿ.

| | | | | | | |
|---|---|---|---|---|---|---|
| ಶಬ್ದ | – | ಸಂಗೀತ | – | ಕಿವಿ | – | ಜಿಂಕೆ |
| ಸ್ಪರ್ಶ | – | ಹೆಣ್ಣು ಆನೆ | – | ಚರ್ಮ | – | ಆನೆ |
| ರೂಪ | – | ನೋಡುವುದು | – | ಕಣ್ಣು | – | ಮಿಡತೆ |
| ರಸಂ | – | ರುಚಿ | – | ನಾಲಿಗೆ | – | ಮೀನು |
| ಗಂಧ | – | ವಾಸನೆ | – | ಮೂಗು | – | ದುಂಬಿ |

**ಮಿಡತೆ :** ದೀಪದ ಕಾಂತಿಗೆ ಆಕರ್ಷಿಸಿ ದೀಪದಲ್ಲಿ ಬಿದ್ದು ಮರಣಿಸುತ್ತದೆ. ಹಾಗೆ ಒಂದೊಂದು ಜೀವಿ ಒಂದೊಂದು ಇಂದ್ರಿಯ ಬಲಹೀನತೆಯಿಂದ ಮರಣಿಸುತ್ತವೆ.

ಅ ತಹುದುರಲ್ಲಿ ಪಂಚೇಂದ್ರಿಯಗಳು ಇರುವ ಮಾನವನಿಗೆ ಈ ಲೋಕ ವಸ್ತುಗಳ ಮೇಲೆ ಎಷ್ಟು ವ್ಯಾಮೋಹ ಇರುತ್ತದೆ? ಆದ್ದರಿಂದ ಆರ್ಥಿಕ ಪರಿಸ್ಥಿತಿಗಳು, ಅನಾರೋಗ್ಯ ಕಾರಣದಿಂದ ನರಕವನ್ನು ಅನುಭವಿಸುತ್ತಾರೆ.

ಗಮನಿಸಿ, ಹೂ ಅರಳಿದಾಗ ಅದರಲ್ಲಿಯ ಮಕರಂದಕ್ಕೆ ಆಸೆಪಟ್ಟು ದುಂಬಿಯು ಅದರ ಮೇಲೆ ವಾಲಿ ಮಕರಂದವನ್ನು ಶೇಖರಿಸುತ್ತಿರುವಾಗ ಹೂ ಮುದುಡಿಕೊಳ್ಳುವುದರಿಂದ ದುಂಬಿ ಹೊರ ಬರಲಾರದೆ ಮರಣಿಸುತ್ತದೆ.

ಹಾಗೆ ಇಂದ್ರಿಯ ವ್ಯಾಮೋಹದಲ್ಲಿರುವವನು, ಮಾಡಬಾರದ ಪಾಪಗಳು ಮಾಡುತ್ತಾ ಹುಟ್ಟು ಸಾವುಗಳ ವಿಷಚಕ್ರದಲ್ಲಿ ಬಂಧಿಯಾಗುತ್ತಾನೆ.

ಇಂದ್ರಿಯ ವ್ಯಾಮೋಹ ಇಲ್ಲದವನಿಗೆ ಲೋಕ ವಸ್ತುಗಳ ಮೇಲೆ ವ್ಯಾಮೋಹ ಇರುವುದಿಲ್ಲ. ಅವರು ಪಾಪಕರ್ಮಗಳನ್ನು ಮಾಡುವುದಿಲ್ಲ, ಮುಕ್ತಿ ಕರ್ಮಗಳನ್ನೇ ಮಾಡುತ್ತಾರೆ.

ಈ ಇಂದ್ರಿಯಗಳಿಗೆ ಮೂಲ ಮನಸ್ಸು. ಮನಸ್ಸು ಮಲಿನವಾಗಿದ್ದರೆ ವ್ಯಾಮೋಹಗಳು ಇರುತ್ತವೆ. ಮನಸ್ಸು ಶುದ್ಧವಾದರೆ ಇಂದ್ರಿಯ ವ್ಯಾಮೋಹ ಇರುವುದಿಲ್ಲ. ಗಂಟೆಗಟ್ಟಲೆ "ಶ್ವಾಸದ ಮೇಲೆ ಗಮನ" ಇಟ್ಟು ಸಾಧನೆ ಮಾಡಿದರೆ ಮಾಡಬಾರದ ಕರ್ಮಗಳನ್ನು ಮಾಡದೆ, ಮಾಡಬೇಕಾದ ಕರ್ಮಗಳನ್ನೇ ಮಾಡುತ್ತಾರೆ. ಅವರು ಜನನ ಮರಣ ಚಕ್ರದಿಂದ ಹೊರಬರುತ್ತಾರೆ.

ವ್ಯಾಮೋಹಗಳು ಕಡಿಮೆಯಾಗುವುದರಿಂದ ಖರ್ಚು ಉಳಿಯುತ್ತದೆ. ಆ ಉಳಿದ ಧನವನ್ನು ಲೋಕ ಕಲ್ಯಾಣದ ಕೆಲಸಗಳಿಗೆ ಖರ್ಚು ಮಾಡುತ್ತಾರೆ. ಹೀಗೆ ಖರ್ಚು ಮಾಡುವುದರಿಂದ ಬರುವ ಪುಣ್ಯದಿಂದ ಜನ್ಮಗಳು ಕಡಿಮೆಯಾಗುತ್ತವೆ. ವಿಚಿತ್ರವೇನೆಂದರೆ "ಭೂಮಿಯ ಆಕರ್ಷಣೆಯ ಶಕ್ತಿಗಿಂತ ಈ ಲೋಕ ವಸ್ತುಗಳ ಮೇಲೆ ಇರುವ ಆಕರ್ಷಣೆ ಬಹಳ ಹೆಚ್ಚು" ಅಂತಹ ಆಕರ್ಷಣೆ ಇರುವವರು ಹುಟ್ಟು ಸಾವುಗಳ ವಿಷಚಕ್ರದಲ್ಲಿ ಬಂಧಿಸಲ್ಪಟ್ಟು ನಲುಗುತ್ತಾ ಇರುತ್ತಾರೆ.

5. ಮಹಾತ್ಮರ ಸಂದೇಶ **"ಜೀನವಕ್ಕೆ ಸರಿಹೋಗುವಷ್ಟು ಹಣವನ್ನು ಸಂಪಾದಿಸಿಕೊಳ್ಳಿರಿ. ನೆನಪಿಡಿ, ಈ ಪ್ರಪಂಚದಿಂದ ಹೋಗುವಾಗ ಹಣ ಉಪಯೋಗಕ್ಕೆ ಬರದು, ಅಷ್ಟೇ ಅಲ್ಲ, ಹಣ ಭಗವಂತನ ಹತ್ತಿರಕ್ಕೆ ಸೇರಿಸುವುದಿಲ್ಲ. ಧನ, ಸಂಪತ್ತುಗಳು ಭಗವಂತನನ್ನು ಹೊಂದುವ ಮಾರ್ಗದಲ್ಲಿ ಅವರೊಧಗಳನ್ನೇ ಉಂಟು ಮಾಡುತ್ತವೆ."**

ಜೀವಿಸುವುದಕ್ಕೆ ಕೆಲವು ಅವಶ್ಯಕತೆಗಳಿವೆ. ಅವು ಆಹಾರ, ಮನೆ, ಬಟ್ಟೆ, ಸಂಗಾತಿ.

ಈ ಅವಶ್ಯಕತೆಗಳು ತೀರಬೇಕೆಂದರೆ ಯಾರಿಗಾಗಲಿ ಹಣ ಅವಸರ, ಆದ್ದರಿಂದ ಜೀವಿಸುವುದಕ್ಕೆ ಸರಿಹೋಗುವಷ್ಟು ಹಣವನ್ನು ಸಂಪಾದಿಸಿಕೊಳ್ಳಬೇಕು. ಹಣವು ಕೋಟಿ ಕೋಟಿ ಅವಶ್ಯಕತೆ ಇಲ್ಲ. ಆದರೆ ಎಷ್ಟು ಕೋಟಿಗಳು ಇದ್ದರೂ ಯಾರಿಗೂ ತೃಪ್ತಿ ಇಲ್ಲ, ಕಾರಣ ಬಯಕೆಗಳು.

ಎಲ್ಲರಿಗಿಂತ ಶ್ರೇಷ್ಠನಾಗಬೇಕು, ಎಲ್ಲರಲ್ಲೂ ದೊಡ್ಡವನು ಎಂದು ಅನ್ನಿಸಿಕೊಳ್ಳಬೇಕು ಎನ್ನುವುದೇ ಆಸೆ. ಅಷ್ಟೇ ಹೊರತು ಅವಶ್ಯಕತೆ ಅಲ್ಲ. ಏಕೆ ಸಂಪಾದಿಸುತ್ತಿರುವೆ ಅಂದರೆ ದೊಡ್ಡವನು ಎಂದು ಅನಿಸಿಕೊಳ್ಳುವುದಕ್ಕೆ ಎನ್ನುತ್ತಾರೆ.

ಸಮಾಜದಲ್ಲಿ ಒಂದು ಅಭ್ಯಾಸವಿದೆ.

1. **ಹಣವಿರುವವನನ್ನೆ ಗೌರವಿಸುವುದು**
2. **ಹಣವಿದ್ದವರಿಗೆ ಬೆಲೆ ಕೊಡುವುದು**
3. **ಹಣವಿಲ್ಲದವನನ್ನು ಕೇವಲವಾಗಿ ನೋಡುವುದು**
4. **ಹಣವಿಲ್ಲದವನಿಗೆ ಹುಲ್ಲುಕಡ್ಡಿಗೂ ಕೊಡುವ ಬೆಲೆ ಕೂಡಾ ಕೊಡದೇ ಇರುವುದು.**

ಆದ್ದರಿಂದ ಹಣವಿದ್ದರೇನೆ ಗೌರವ, ಬೆಲೆ ಎಂದು ಬದುಕೆಲ್ಲಾ ಹಣ ಸಂಪಾದಿಸುವುದಕ್ಕೆ ವ್ಯಯಿಸುತ್ತಾರೆ. ಭೂಮಿಯ ಮೇಲೆ ದೊಡ್ಡವನಾಗಿ ಇರಬೇಕೆಂದರೆ ಹಣವಿರಬೇಕು. ಆದರೆ ಯಾರಾಗಲಿ ಕೆಲವು ದಿನಗಳ ನಂತರ ಮರಣಿಸಬೇಕಾದದ್ದೇ. ಆದರೆ ಮೇಲೆ ಹೋದ ಮೇಲೆ ಜ್ಞಾನವಿರುವವರು ಮೇಲಿನ ಲೋಕಗಳಿಗೆ ಹೋಗುತ್ತಾರೆ. ಆದರೆ ಭೂಮಿಯ ಮೇಲೆ ಎಷ್ಟು ಧನವಿದ್ದರೆ ಅಷ್ಟು ದೊಡ್ಡವನು. ಮೇಲಿನ ಲೋಕಗಳಲ್ಲಿ ಎಷ್ಟು ಜ್ಞಾನವಿದ್ದರೆ ಅಷ್ಟು ಶ್ರೇಷ್ಠನು. ಶರೀರ ಇರುವಾಗ ಹಣಕ್ಕೆ ಬೆಲೆ, ಶರೀರ ಇಲ್ಲದಿರುವಾಗ ಜ್ಞಾನಕ್ಕೆ ಬೆಲೆ, ಗಮನಿಸಿದರೆ ಅಶಾಶ್ವತವಾದದ್ದು ಹಣ. ಶಾಶ್ವತವಾದದ್ದು ಆತ್ಮಜ್ಞಾನ. ಶಾಶ್ವತದಲ್ಲಿ ಶ್ರೇಷ್ಠನಾಗಬೇಕೆಂದರೆ ಜ್ಞಾನಬೇಕು.

ಯಾರಾಗಲಿ ಈ ಭೂಮಿಯ ಮೇಲೆ ಎಷ್ಟೋ ಕಾಲ ನಾನಿರುವುದಿಲ್ಲ ಎಂಬ ಅರಿವು ಬಂದರೆ ಧನಕ್ಕೆ ಪ್ರಾಮುಖ್ಯತೆ ಕೊಡುವುದಿಲ್ಲ. ಪತ್ರೀಜಿಯವರು ಪರಿಚಯವಾದ ನಂತರ ಅರ್ಥ ಮಾಡಿಕೊಂಡೆವು. ನಾವು ದೇಹಗಳಲ್ಲ, ಆತ್ಮಗಳೆಂದು. ಆತ್ಮಗಳಾದ

ನಾವು ಭೂಮಿಯ ಮೇಲೆ ಎಷ್ಟೋ ಕಾಲ ಇರುವುದಿಲ್ಲ. ಸ್ವಲ್ಪ ಕಾಲದ ನಂತರ ಮೇಲಿನ ಲೋಕಗಳಿಗೆ ಹೋಗುತ್ತೇವೆ ಎಂದು ತಿಳಿದುಕೊಂಡೆವು. ಆದ್ದರಿಂದ ಇಲ್ಲಿ ಶಾಶ್ವತವಾಗಿ ಇರುವುದಿಲ್ಲವಾದ್ದರಿಂದ ಯಾವುದು ಶಾಶ್ವತವೊ? ಅದನ್ನೇ ಸಂಪಾದಿಸುತ್ತಿದ್ದೇವೆ.

ಅಷ್ಟೇ ಅಲ್ಲ ಜ್ಞಾನವೇ ನಮ್ಮನ್ನು ದೊಡ್ಡವರನ್ನಾಗಿ ಮಾಡುತ್ತದೆ ಎಂದು ತಿಳಿದುಕೊಂಡೆನು. ಆಗ ಧನ ಸಂಪಾದನೆ ಬಿಟ್ಟು ಜ್ಞಾನ ಸಂಪಾದನೆ ಪ್ರಾರಂಭಿಸಿದೆವು. ಇನ್ನೂ ಏನು ಅರ್ಥವಾಯಿತೆಂದರೆ, ಭೂಮಿಯ ಮೇಲೆ ದೊಡ್ಡತನ, ದೊಡ್ಡತನವಲ್ಲ, ಮೇಲಿನ ಲೋಕಗಳಲ್ಲಿರುವ ಶ್ರೇಷ್ಠತೆಯೇ ಅಸಲಾದ ಶ್ರೇಷ್ಠತೆಯೆಂದು ತಿಳಿದು ಕೊಂಡೆವು.

ಇನ್ನೂ ಏನು ತಿಳಿದುಕೊಂಡೆವು ಅಂದರೆ ಹಣದ ಹಿಂದೆ ಬಿದ್ದರೆ ಹಣವನ್ನು ಸಂಪಾದಿಸಲಾರೆವು, ಆದರೆ ಜ್ಞಾನದ ಹಿಂದೆ ಬಿದ್ದರೆ ಸಂಪಾದಿಸಬಲ್ಲೆವು. ಇದಕ್ಕೆ ಕಾರಣ ಹಣ ಸಂಪಾದಿಸಬೇಕೆಂದರೆ ಅರ್ಹತೆ ಇರಬೇಕು, ಕೃಷಿಪಟ್ಟರೋ, ಕಷ್ಟಪಟ್ಟರೋ ಬಾರದು ಎಂದು ತಿಳಿದುಕೊಂಡೆವು.

ಅಷ್ಟೇ ಅಲ್ಲ ಜ್ಞಾನವೆನ್ನುವುದು ಕೃಷಿಯ ಮೂಲಕ ಎಷ್ಟಾದರೂ ಸಂಪಾದಿಸಬಹುದು. ಕೃಷಿ ಎಂದರೆ ಶ್ರದ್ಧೆ, ಆದ್ದರಿಂದ "ಶ್ರದ್ಧಾವಾನ್ ಲಭತೇ ಜ್ಞಾನಂ" ಎಂದು ಶ್ರೀಕೃಷ್ಣ ಭಗವಾನರು ಹೇಳಿದ್ದಾರೆ.

ಯಾರ ಗುರಿಯಾದರೂ ಸರಿ ಭಗವಂತನನ್ನು ಹೊಂದುವುದು. ಭಗವಂತನನ್ನು ಹೊಂದಬೇಕೆಂದರೆ ಭಗವಂತನು ಇರುವ ಲೋಕವನ್ನು ಸೇರಬೇಕು. ಅದೇ ಸತ್ಯಲೋಕ. ತಪೋಲೋಕವನ್ನು ಸೇರಿದರೂ ಭಗವಂತನನ್ನು ಸೇರಿದಂತೆ ಅಲ್ಲ, ಸತ್ಯಲೋಕವನ್ನು ಸೇರಿದರೇನೆ ಭಗವಂತನನ್ನು ಸೇರಿದಂತೆ. ಆದ್ದರಿಂದ ಕೋಟಿಗಳಿದ್ದರೂ ಅವನಿಗಿಂತ ಸ್ವಲ್ಪಮಟ್ಟದ ಜ್ಞಾನವಿರುವವನೇ ಶ್ರೇಷ್ಠನು.

# ಆತ್ಮಜ್ಞಾನಿ ವರ್ತನೆ ಹೇಗೆ ಇರುತ್ತದೆ?

1. ಆತ್ಮಜ್ಞಾನಿ ಆಧ್ಯಾತ್ಮಿಕ ಪ್ರಯಾಣದಲ್ಲಿ ಲಕ್ಷ್ಯಗಳು ಇರುತ್ತವೆ ಎಂದು ಅರ್ಥ ಮಾಡಿಕೊಳ್ಳುತ್ತಾನೆ.
2. ಆತ್ಮಜ್ಞಾನಿ ಸಾಮಾನ್ಯರಿಂದ, ಉತ್ತಮರಿಂದ ಕಲಿಯುತ್ತಾ ಇರುತ್ತಾನೆ.
3. ಆತ್ಮಜ್ಞಾನಿ ಆತ್ಮ ವಿಷಯಗಳ ಹೊರತು ಬೇರೆ ವಿಷಯಗಳನ್ನು ಮಾತನಾಡುವುದಿಲ್ಲ. ಪ್ರಸ್ತಾಪಿಸುವುದಿಲ್ಲ.
4. ಆತ್ಮಜ್ಞಾನಿ ತಿಳಿದವರೊಂದಿಗೆ ಸಾಂಗತ್ಯ ಮಾಡುತ್ತಾನೆ. ಇತರರ ವಿಷಯಗಳನ್ನು ಮಾತನಾಡುವುದಿಲ್ಲ.
5. ಆತ್ಮಸಂಬಂಧವಾದ ಆಧ್ಯಾತ್ಮಿಕ ಪ್ರಸ್ತಕಗಳನ್ನು ಓದುತ್ತಾನೆ, ಇನ್ನೂ ತಿಳಿದುಕೊಳ್ಳಬೇಕೆಂದು ಪ್ರಯತ್ನಿಸುತ್ತಾನೆ.
6. ಎಷ್ಟು ಪುಸ್ತಕಗಳನ್ನು ಓದಿದರೆ ಅಷ್ಟು ಹೆಚ್ಚು ಜ್ಞಾನವನ್ನು ಹೊಂದುತ್ತೇವೆ ಎಂಬುದನ್ನು ತಿಳಿದುಕೊಳ್ಳುತ್ತಾನೆ.
7. ದೊಡ್ಡವರನ್ನು ನೋಡಿದಾಗ ಅಲ್ಲ, ಅವರ ಬೋಧನೆಗಳನ್ನು ಕೇಳಿದಾಗ, ಅವರ ಪುಸ್ತಕಗಳನ್ನು ಓದಿದಾಗ ಮಾತ್ರವೇ ಅವರ ಜ್ಞಾನವು ಅವಗಾಹನೆಗೆ ಬರುತ್ತದೆ.
8. ಅಷ್ಟೇ ಅಲ್ಲ ಜ್ಞಾನವುಳ್ಳವರ ಸಾಂಗತ್ಯ ಮಾಡಿದರೂ, ಅಂತಹ ಪುಸ್ತಕಗಳನ್ನು ಓದುವವರ ಸಾಂಗತ್ಯವನ್ನು ಮಾಡಿದರೂ ಜ್ಞಾನವನ್ನು ಹೊಂದಬಹುದೆಂದು ತಿಳಿದುಕೊಳ್ಳುತ್ತಾನೆ.
9. ಆತ್ಮಜ್ಞಾನಿ ಅವಶ್ಯಕವಿಲ್ಲದ್ದು ನಮ್ಮ ಬಳಿಗೆ ಬಾರದು ಎಂಬ ಅರಿವನ್ನು ಮಾಡಿಕೊಳ್ಳುತ್ತಾನೆ.
10. ಆತ್ಮಜ್ಞಾನಿ ನಮಗೆ ನಾವೇ ನಿರ್ಣಯಿಸಿಕೊಂಡು ಬರುತ್ತೇವೆ ಎಂಬುದನ್ನು ತಿಳಿದುಕೊಳ್ಳುತ್ತಾನೆ.

11. ಆತ್ಮಜ್ಞಾನಿ ಎಲ್ಲಿಗೂ ಹೋಗಬೇಕಾದ ಕೆಲಸವಿಲ್ಲ. ಎಲ್ಲಿಗೆ ಹೋದರೂ ಮಾಡಬೇಕಾಗಿರುವುದು ಧ್ಯಾನವೇ, ಹೊಂದಬೇಕಾದದ್ದು ಜ್ಞಾನವೇ ಎಂದು ತಿಳಿಯುತ್ತದೆ. ನಾವು ಮಾಡಬೇಕಾಗಿರುವುದು ಮಾಡುವುದಕ್ಕೆ, ಹೊಂದಬೇಕಾದದ್ದು ಹೊಂದುವುದಕ್ಕೆ ನಮ್ಮ ಮನೆಯೇ ಅನುಕೂಲವಾದ ಪ್ರದೇಶವೆಂದು ತಿಳಿದುಕೊಳ್ಳುತ್ತಾನೆ.

12. ಮಾಡಿದ್ದನ್ನು ಮಾಡುವುದಕ್ಕೆ ಜನ್ಮಗಳಿರುವುದಿಲ್ಲ, ಮಾಡದ್ದನ್ನು ಮಾಡುವುದಕ್ಕೆ ಹೊಸ ಜನ್ಮವೆಂದು ಅರ್ಥ ಮಾಡಿಕೊಳ್ಳುತ್ತಾನೆ.

13. ಅನುಭವಗಳು ಬಂದವನಿಗಿಂತ, ಅನುಭವಗಳು ಬಾರದವನು ಇನ್ನೂ ಶ್ರೇಷ್ಠನೆಂದು ಕೂಡಾ ತಿಳಿದುಕೊಳ್ಳುತ್ತಾನೆ.



ಮಹಾಯೋಗಿಗಳೆಲ್ಲಾ ಎಷ್ಟೋ ಕಷ್ಟಪಟ್ಟಿದ್ದಾರೆ, ಶ್ರೇಷ್ಠ ಸಾಧನೆಗಳನ್ನು ಮಾಡಿ, ಸತ್ಯವನ್ನು ತಿಳಿದುಕೊಂಡರು, ಮಾನವನ ದುಃಖಕ್ಕೆ ಕಾರಣವನ್ನು ತಿಳಿದುಕೊಂಡರು, ದುಃಖದಿಂದ ಹೊರಬರುವ ಮಾರ್ಗವನ್ನು ತಿಳಿದುಕೊಂಡಿದ್ದಾರೆ, ಅದೇ ಎಲ್ಲರಿಗೂ ಬೋಧಿಸಿದರು.

- "ಮಾನವನ ಗುಣವನ್ನಾಧರಿಸಿ ಅವರು ಮಾಡುವ ಕೆಲಸಗಳು ಆಧಾರ ಪಟ್ಟಿರುತ್ತವೆ, ಅವರ ಮಾತುಗಳು ಆಧಾರ ಪಟ್ಟಿರುತ್ತವೆ, ಅವರು ಮಾಡುವ ಸೇವೆಗಳು ಆಧಾರವಾಗಿರುತ್ತವೆ".

- "ಮಾನವನಾದರೂ ಸರಿ ತಮ್ಮ ಕೈಗಳಿಂದ ಧರ್ಮದಿಂದ ಸಂಪಾದಿಸಿ, ತಾವು ಉಂಡು ಅದರೊಳಗಿಂದ ಸ್ವಲ್ಪ ಇತರರಿಗೆ ಹಂಚಿಬಿಡಬೇಕು, ಅಂತಹವರೇ ಭಗವಂತನನ್ನು ಹೊಂದಬಲ್ಲರು"'.

- "ಭಗವಂತನನ್ನು ಆಶ್ರಯಿಸಬೇಕೆಂದರೆ ಯಾವ ಜೀವಿಗೂ ನೋವುಂಟು ಮಾಡಬಾರದು, ಜೀವಹಿಂಸೆ ಮಾಡಬಾರದು, ಯಾವ ಜೀವಹಾನಿಯನ್ನು ಮಾಡಬಾರದು'.

- "ಯಾರಿಂದಲೂ ಏನನ್ನು ಆಶಿಸಬಾರದು, ಎಲ್ಲರಿಗೂ ಸೇವೆಯನ್ನು ಮಾಡಬೇಕು, ಸಹಕಾರವನ್ನು ಕೊಡಬೇಕು".

- "ಈ ಲೋಕ ವಸ್ತುಗಳ ಮೇಲೆ ವ್ಯಾಮೋಹವು ನಮ್ಮನ್ನು ಪದೇ ಪದೇ ಈ ಅಧೋಲೋಕಕ್ಕೆ ಕರೆತಂದು, ಹುಟ್ಟು ಸಾವುಗಳ ವಿಷ ಚಕ್ರದಲ್ಲಿ ಬಂಧಿಸುತ್ತದೆ".

**ಬ್ರಹ್ಮರ್ಷಿ ತಟವರ್ತಿ ವೀರರಾಘವರಾವ್**

**ರೂ 40/-**

**ಪಿರಮಿಡ್ ಸ್ಪಿರಿಚ್ಯುಯಲ್ ಸೊಸೈಟೀಸ್ ಮೂವ್‌ಮೆಂಟ್, ಇಂಡಿಯಾ**

ಧ್ಯಾನದ ಬಗ್ಗೆ ಮತ್ತಷ್ಟು ಸಮಾಚಾರಕ್ಕಾಗಿ ಈ ಕೆಳಗಿನ ವೆಬ್‌ಸೈಟ್ ಸಂದರ್ಶಿಸಿ

https: //www.youtube.com/pmckannada ● www.meditationeverywhere.org ● www.pssmovement.org

**ಶ್ರೀರಾಮ ಪಬ್ಲಿಕೇಶನ್ಸ್**

ಶ್ರೀರಾಮಧಾಮ ಧ್ಯಾನಕೇಂದ್ರ, ನಾರಾಯಣಪ್ಪ ಗಾರ್ಡನ್,
ವೈಟ್ ಫೀಲ್ಡ್, ಬೆಂಗಳೂರು - ೫೬೦ ೦೬೬
ಸಂಪರ್ಕಿಸಿ : ಹೆಚ್.ಎನ್. ಶ್ರೀನಿವಾಸ, 9449695503
ವಿಜಯಲಕ್ಷ್ಮಿ ಎಸ್.ಎನ್. + 91 80500 82669